# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS



94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 33 • ಆರ್.ಎನ್.ಐ. ನಂ.:KARKAN/2023/88055 • ವಿಜಯನಗರ • 28.07.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 33 • RNI No:KARKAN/2023/88055 • VIJAYANAGARA • 28.07.2024 • Sunday • Page:04 • Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ



ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com


## ತುಂಬಿ ತುಳುಕುತ್ತಿದ್ದಾಳೆ ತುಂಗಭದ್ರೆ

### ಟಿಬಿಡ್ಯಾಂಗೆ ಒಳಹರಿವು 1,03,676 ಕ್ಯುಸೆಕ್ | ಹೊರ ಹರಿವು 1,17,571 ಕ್ಯುಸೆಕ್ | 100.523 ಟಿಎಂಸಿ ನೀರು ಸಂಗ್ರಹ



**ಮೈಕ್ರೋ ನ್ಯೂಸ್**

## ಆಗಸ್ಟ್ 2 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-3: ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಕೊಪ್ಪಳ**

2024ರ ಎಸ್.ಎಸ್.ಎಲ್.ಸಿ ಪರೀಕ್ಷೆಗಳು–3ರ ಪರೀಕ್ಷೆಗಳು ಆಗಸ್ಟ್ 2ರಿಂದ ಆ.09 ರವರೆಗೆ ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಸುಗಮ ಮತ್ತು ಶಾಂತಿಯುತವಾಗಿ ಪರೀಕ್ಷೆಗಳು ನಡೆಯುವ ಉದ್ದೇಶದಿಂದ ಕಲಂ 144 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯಿಂದ ನಡೆಸುತ್ತಿರುವ 2024ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–3 ಆಗಸ್ಟ್ 02 ರಿಂದ ಆ.09ರವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 02 ಗಂಟೆಯವರೆಗೆ ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ ಹಾಗೂ ಕುಕನೂರು ತಾಲ್ಲೂಕಿನ ಒಟ್ಟು 13 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಜಿಲ್ಲೆಯ ಒಟ್ಟು 13 ಪರೀಕ್ಷಾ ಕೇಂದ್ರಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗಳು–3 ನಡೆಯಲಿವೆ. ಪರೀಕ್ಷಾ ಕೇಂದ್ರದ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯ ವಾಗುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಮುಂಜಾಗ್ರತೆಯಿಂದ ಡೆಂಗ್ಯು ನಿಯಂತ್ರಣ ಸಾಧ್ಯ

### ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವಿಜಯನಗರ ಜಿಲ್ಲಾ ಉಪಾಧ್ಯಕ್ಷ ಕೆ. ರವಿಶಂಕರ್ ಅಭಿಮತ | ಸೊಳ್ಳೆ ಪರದೆ, ಕಾಯಿಲ್ ವಿತರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ಎಲ್ಲೆಡೆ ಸ್ವಚ್ಛತೆ ಕಾಪಾಡಿಕೊಳ್ಳುವ ಮೂಲಕ ಡೆಂಗ್ಯು ನಿಯಂತ್ರಣಕ್ಕೆ ಮುಂಜಾಗ್ರತೆವಹಿಸುವುದು ಅತ್ಯಗತ್ಯ. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವಿಜಯನಗರ ಜಿಲ್ಲಾ ಘಟಕದಿಂದ ಅತ್ಯವಶ್ಯವಿರುವರಿಗೆ ಸೊಳ್ಳೆ ಪರದೆ, ಸೊಳ್ಳೆ ಕಾಯಿಲ್ ಮತ್ತು ಮಾಸ್ಕ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಜಿಲ್ಲಾ ಉಪಾಧ್ಯಕ್ಷ ಕೆ. ರವಿಶಂಕರ್ ಹೇಳಿದರು.

ನಗರದ ಪಟೇಲ್ ನಗರದಲ್ಲಿರುವ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಘಟಕದ ಸಭಾಪತಿ ಶ್ರೀನಿವಾಸ್ ರಾವ್ ಅಧ್ಯಕ್ಷತೆಯಲ್ಲಿ ಶನಿವಾರ ಸೊಳ್ಳೆ ಪರದೆ ವಿತರಿಸಿ ಮಾತನಾಡಿದರು.

ನಗರದಲ್ಲಿ ಡೆಂಗ್ಯೂ ಹೆಚ್ಚಳಗೊಂಡಿರುವುದು ಜನರಲ್ಲಿ ಆತಂಕ ತಂದಿದೆ. ನಗರದ ಸ್ವಚ್ಛತೆ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಸ್ವಚ್ಛತೆ ನಿರ್ಲಕ್ಷ್ಯಿಸಿದರೆ ಆಸ್ಪತ್ರೆ ಬಾಗಿಲು ತಟ್ಟಬೇಕಾಗುತ್ತದೆ. ಮುಂಜಾಗ್ರತಕ್ರಮವಾಗಿ ಜನರು ವಾಸಿಸುವ ಸುತ್ತಮುತ್ತ ಸ್ವಚ್ಛತೆಗೆ ಆದ್ಯತೆ ನೀಡಿ, ನಗರಸಭೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕು ಮತ್ತು ನಗರಸಭೆ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ನಗರದಲ್ಲಿ ಹೆಚ್ಚುತ್ತಿರುವ ಡೆಂಗ್ಯು ನಿಯಂತ್ರಣಗೊಳಿಸಬೇಕು ಎಂದರು.

ನಗರಸಭಾ ಸದಸ್ಯರಾದ ರೂಪೇಶ್ ಕುಮಾರ್, ಸದಸ್ಯ ಅಬ್ದುಲ್ ಖದೀರ್ ನೇತೃತ್ವದಲ್ಲಿ ನಗರದ 5 ಮತ್ತು 6ನೇ ವಾರ್ಡ್ ಹಾಗೂ ಇತರರು ಸೇರಿದಂತೆ 75 ಜನರಿಗೆ ಸೊಳ್ಳೆ ಪರದೆ, ಕಾಯಿಲ್ ಮತ್ತು ಮಾಸ್ಕ್ ಗಳನ್ನು ವಿತರಿಸಲಾಯಿತು.

ಜಿಲ್ಲಾ ಪ್ರತಿನಿಧಿ ರೇಖಾ ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಅನ್ನಪೂರ್ಣ ಸದಾಶಿವ, ಸದಸ್ಯರಾದ. ಬಿಂದು ಮಲ್ಲಿಕಾರ್ಜುನ, ಜಗದೀಶ್ ರೆಡ್ಡಿ, ಪ್ರಭಾಕರ್, ಅಬ್ದುಲ್ ರೆಹಮಾನ್, ತಿಪ್ಪೇಸ್ವಾಮಿ, ಕೊಟ್ರಪ್ಪ ಹಾಗೂ ಇತರರು ಇದ್ದರು.

## ಕಾರ್ಗಿಲ್ ವಿಜಯೋತ್ಸವ, ಹುತಾತ್ಮರ ಸ್ಮರಣೆ

**ಹಂಪಿ ಟೈಮ್ಸ್ ಕೊಟ್ಟೂರು**

ಕಾರ್ಗಿಲ್ ವಿಜಯದಿನದ ರಜತ ಮಹೋತ್ಸವದ ನಿಮಿತ್ತ ಜೆಸಿಐ ಕೊಟ್ಟೂರು ಕಾಟನ್ ಮತ್ತು ಹಸಿರು ಹೊನಲು ತಂಡ ಜಂಟಿಯಾಗಿ ಶುಕ್ರವಾರ ರಾತ್ರಿಪಟ್ಟಣದಲ್ಲಿ ಪಂಜಿನ ಮೆರವಣಿಗೆ ಹಾಗೂ ರಾಷ್ಟ್ರಧ್ವಜದ ಮೆರವಣಿಗೆ ಕೈಗೊಂಡು ಯುವ ಜನತೆಗೆ ರಾಷ್ಟ್ರಾಭಿಮಾನ ಮೂಡಿಸಿದರು.

ಶ್ರೀ ಗುರುಕೊಟ್ಟರೇಶ್ವರ ಮಠದಿಂದ ಬಸ್ಟ್ಯಾಂಡ್ ವರಿಗೆ ಪಂಜಿನ ಮೆರವಣಿಗೆ ಜತೆಗೆ 25 ದೀಪಗಳನ್ನು ಬೆಳಗಿಸಿ ರಾಷ್ಟ್ರಧ್ವಜದ ಮೆರವಣಿಗೆಯೊಂದಿಗೆ ನೂರಾರು ರಾಷ್ಟ್ರ ಪ್ರೇಮಿಗಳ ಹಾಗೂ ದೇಶಪ್ರೇಮದ ಹಾಡುಗಳನ್ನು ಹಾಡುತ್ತ, ಹುತಾತ್ಮ ಯೋಧರನ್ನು ಸ್ಮರಿಸಿದರು.

ಈ ವೇಳೆ ಜೆಸಿಐನ ಅಧ್ಯಕ್ಷ ನಂದೀಶ್ ತುರಕಾಣಿ ಮತ್ತು ಹಸಿರು ಹೊನಲು ತಂಡದ ಅಧ್ಯಕ್ಷ ಗುರುರಾಜ್ ವೀರಯೋಧರನ್ನ ಸ್ಮರಿಸುತ್ತ ಕೊಟ್ಟೂರಿನ ಮಾಜಿ ಯೋಧರಾದ ಶೆಟ್ಟಿ ರಾಜಶೇಖರ್ ಮತ್ತು ಅಜ್ಜಪ್ಪ ಅವರನ್ನು ಸನ್ಮಾನಿಸಿ ಗೌರವಿಸಿದರು.

ಬಸ್ಟ್ಯಾಂಡ್ ಮುಖ್ಯರಸ್ತೆಯಲ್ಲಿ ಕಾರ್ಗಿಲ್ ವಿಜಯೋತ್ಸವದ ಹಾಡು,ದೇಶ ಭಕ್ತಿಗೀತೆಗಳು >>4




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
scan to read

ಕರಪತ್ರಗಳಿಗಿಂತ ದಿನಪತ್ರಿಕೆಯಲ್ಲಿ ಮುದ್ರಣಗೊಂಡ ಜಾಹೀರಾತು ಮಾಹಿತಿಗಳ ಮೇಲೆ ಓದುಗರಿಗೆ ಅಧಿಕ ವಿಶ್ವಾಸ!

ನಿಮ್ಮ ಬಜೆಟ್ ಗೆ ತಕ್ಕ ಜಾಹೀರಾತನ್ನು

ನಂ.1 ಜಿಲ್ಲೆಯ ದಿನಪತ್ರಿಕೆ

ಹಂಪಿ ಟೈಮ್ಸ್

ದಿನಪತ್ರಿಕೆಯಲ್ಲಿ ನೀಡಿ ಅತ್ಯಧಿಕ ಓದುಗರನ್ನು ತಲುಪಿ

94486 33038
www.hampitimes.com
epaper.hampitimes.com
Vijayanagara
hampitimes@gmail.com

JOIN Whatsapp Channel For E-Paper

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಮನುಷ್ಯನಿಗೆ ಸಿಟ್ಟು– ಕೋಪ ಇರಬೇಕು !!

ಸಾರ್ವಜನಿಕ ಜೀವನದಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿ ನಾವೆಲ್ಲ ಸಿಟ್ಟು ಮತ್ತು ಕೋಪ ಮಾಡಿಕೊಳ್ಳುತ್ತಿರುತ್ತೇವೆ ಮತ್ತು ಮಾಡಿಕೊಳ್ಳುವವರನ್ನು ನೋಡುತ್ತಲೇ ಇರುತ್ತೇನೆ. ನಿಜ ಹೇಳಬೇಕೆಂದರೆ ಸಿಟ್ಟು ಮತ್ತು ಕೋಪ ಎಲ್ಲರಿಗೂ ಬೇಕು ಎಂದು ಹೇಳಿದರೆ ಯಾರೂ ಒಪ್ಪುವುದಿಲ್ಲ. ಒಂದು ಹಂತದಲ್ಲಿ ಸಿಟ್ಟು ಮತ್ತು ಕೋಪದ ಮನಸ್ಥಿತಿಯು ವಾತಾವರಣ ಅಥವಾ ಸನ್ನಿವೇಶವನ್ನು ನಿಯಂತ್ರಣದಲ್ಲಿ ಇಡಲು ಸಹಕರಿಸುತ್ತದೆ. ಇಲ್ಲೊಂದು ಮಾತು ನೆನಪಿನಲ್ಲಿರಲಿ, ಸಿಟ್ಟು ಮತ್ತು ಕೋಪ ಇರಬೇಕೇ ವಿನಾ ಅದರ ಹಿಂದೆ ದ್ವೇಷ ಇರಬಾರದು ಅಷ್ಟೇ. ಮನೆಯಲ್ಲಿ ನಮ್ಮ ಮಕ್ಕಳು ಓದದೇ ಬರೀ ಮೊಬೈಲ್ ಅಥವಾ ಟೀವಿ ನೋಡುತ್ತಿದ್ದರೆ ಅಲ್ಲಿ ಸುಮ್ಮನೆ ಕೂರಲು ಆಗುವುದಿಲ್ಲ. ಬದಲಿಗೆ ತುಸು ಸಿಟ್ಟು ಮತ್ತು ಕೋಪದಿಂದ ಮಕ್ಕಳನ್ನು ಗದರಿದರೆ ಅ ಮಟ್ಟಿಗೆ ಅವರು ಓದುವ ಅಥವಾ ಬರೆಯುವತ್ತ ಗಮನ ಹರಿಸುತ್ತಾರೆ. ಇಲ್ಲವಾದರೆ ತಿಳಿವಳಿಕೆ ಇರದ ಮಕ್ಕಳು ದಾರಿ ತಪ್ಪುವ ಆತಂಕವಿರುತ್ತದೆ. ಅವರ ಭವಿಷ್ಯ ಉತ್ತಮವಾಗಿರಬೇಕೆಂದರೆ ಆಗಾಗ್ಗೆ ಸಿಟ್ಟು ಮತ್ತು ಕೋಪದ ಪ್ರದರ್ಶನ ಇರಲೇಬೇಕು. ಶಾಲೆಗಳ ತರಗತಿಗಳಲ್ಲೂ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಮೇಲೆ ಸಿಟ್ಟು ಮತ್ತು ಕೋಪ ಮಾಡಿಕೊಳ್ಳುತ್ತಾರೆ. ಏಕೆಂದರೆ ಅವರ ಗಲಾಟೆ ಮತ್ತು ಹರಟೆಯಲ್ಲಿದ್ದಾಗ ಈ ಸಿಟ್ಟು ಮತ್ತು ಕೋಪ ಅನಿವಾರ್ಯ. ನೆನಪಿಡಿ ಈ ಸಿಟ್ಟಿನ ಮತ್ತು ಕೋಪದ ಹಿಂದೆ ಯಾವುದೇ ದ್ವೇಷ ಇರುವುದಿಲ್ಲ. ದ್ವೇಷವಿರದ ಸಿಟ್ಟು ಮತ್ತು ಕೋಪ ಆರೋಗ್ಯಕ್ಕೂ ಮತ್ತು ಸಮಾಜಕ್ಕೂ ಹಾನಿಕರವಲ್ಲ, ಬದಲಿಗೆ ಸ್ವಾಸ್ಥ್ಯ ವಾತಾವರಣಕ್ಕೆ ಪೂರಕ. ಯಾವುದಾದರೂ ರಸ್ತೆಯಲ್ಲಿ ಯಾರಾದರೂ ಪುಂಡರು ಕೀಟಲೆ ಮಾಡುವುದೋ ಅಥವಾ ಯುವತಿಯರನ್ನು ಚುಡಾಯಿಸುವುದೋ ಅಥವಾ ಯಾರಿಗಾದರೂ ಅಸಂವಿಧಾನಕವಾಗಿ ನಡುವಳಿಕೆ ಪ್ರದರ್ಶಿಸುತ್ತಿದ್ದರೆ ಅಲ್ಲಿದ್ದ ಹಿರಿಯರು ಪುಂಡರಿಗೆ ಸಿಟ್ಟು ಮತ್ತು ಕೋಪದ ಮೂಲಕ ಗದರಿದರೆ ಅಲ್ಲಿನ ಸನ್ನಿವೇಶ ನಿಯಂತ್ರಣಕ್ಕೆ ಬರುತ್ತದೆ. ಇಂಥ ಸಿಟ್ಟು ಮತ್ತು ಕೋಪಗಳು ಎಲ್ಲರಿಗೂ ಬೇಕು. ಅದು ಸ್ವಾರ್ಥವಾಗಿರಬಾರದು ಅಷ್ಟೇ.



ನಮ್ಮನ್ನು ಹೆಚ್ಚು ಪ್ರೀತಿಸುವವರೇ, ನಮ್ಮನ್ನು ಹೆಚ್ಚು ಆತ್ಮೀಯವಾಗಿ ನೋಡಿಕೊಳ್ಳುವವರಿಂದಲೇ ನಮ್ಮ ಮೇಲೆ ಸಿಟ್ಟು ಮತ್ತು ಕೋಪ ಪ್ರದರ್ಶನ ಮಾಡುತ್ತಾರೆ. ನಮ್ಮಲ್ಲಿ ತಪ್ಪಾದಾಗ ಅಥವಾ ನಮ್ಮಿಂದ ತಪ್ಪಾದಾಗ ಅಥವಾ ನಾವು ಹಾದಿ ತಪ್ಪಿ ಜೀವನದಲ್ಲಿ ನಡೆದಾಗ ಆತ್ಮೀಯರು, ಹಿರಿಯರು, ಪಾಲಕರು ನಮ್ಮನ್ನು ಗದರುತ್ತಾರೆ. ಅದು ನಮ್ಮಲ್ಲಿ ಅವರಿಗಿರುವ ಪ್ರೀತಿ ಮತ್ತು ಮಮಕಾರವೇ ಹೊರತು ಅದರ ಹಿಂದೆ ಯಾವುದೇ ದ್ವೇಷ ಅಥವಾ ಅಸೂಯೆ ಇರಲಾರದು. ಅಸಲಿಗೆ ಕೋಪ ಮತ್ತು ಸಿಟ್ಟು ಎಂಬುದು ಮನಷ್ಯನಿಗೆ ಇರದೇ ಹೋಗಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಒಮ್ಮೆ ಯೋಚಿಸಿ. ಆಗ ಯಾರ ಮಾತನ್ನೂ ಯಾರೂ ಕೇಳುತ್ತಿರಲಿಲ್ಲ. ತಂದೆ–ತಾಯಿ ಮಾತನ್ನು ಮಗ, ಶಿಕ್ಷಕರ ಮಾತನ್ನು ವಿದ್ಯಾರ್ಥಿಗಳು ಕೇಳದಿದ್ದರೆ ಸಮಾಜ ಏನಾದೀತು ಒಮ್ಮೆ ಯೋಚಿಸಿ. ಅದಕ್ಕಾಗೇ ಪ್ರೀತಿ ಮತ್ತು ವಿಶ್ವಾಸದ ನಡುವೆಯೂ ಸಾತ್ವಿಕ ಕೋಪ ಮತ್ತು ಸಿಟ್ಟು ಬೇಕೇಬೇಕು. ಇದು ಸಮಾಜ ಸ್ವಾಸ್ಥವನ್ನು ಕಾಪಾಡುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪುರಾಣದ ಜಾಹ್ನವಿಯೇ ಹಂಪಿ ಹೊಳೆ - ತುಂಗಭದ್ರಾ

ಶ್ರೀ ವಿರೋಪಾಕ್ಷಸ್ತು ವಿಶ್ವೇಶ್ವರಂ ತುಂಗಭದ್ರಾ ಜಾಹ್ನವೀ ಪಂಪಾಕಾಶಿ ಸಮಾದಿವ್ಯ ಭುಕ್ತಿ ಮುಕ್ತಿ ಪ್ರದಾಯಿನಿ. ಎಂದು ಸಪ್ತರ್ಷಿಗಳಿಂದ ಪೂಜ್ಯನೀಯವೆನಿಸಿದ ಹಂಪಿ ಮತ್ತು ತುಂಗಭದ್ರಾ ನದಿಗೆ ಮಹತ್ವವಿದೆ.



ಹಂಪಿಯ ಪ್ರದೇಶದಲ್ಲಿ ಬೆಟ್ಟ ಗುಡ್ಡಗಳ ನಡುವೆ ಹರಿಯುತ್ತಿರುವ ಅತ್ಯಂತ ಪವಿತ್ರವಾದ ತುಂಗಾಭದ್ರಾ ನದಿಗೆ ಮಹತ್ವವಿದೆ. ಪೌರಾಣಿಕವಾಗಿ ಗಂಗಾ ನದಿಯಷ್ಟೇ ಪವಿತ್ರವಾದಂತಹ ಮತ್ತು ಧಾರ್ಮಿಕವಾಗಿ ಪೂಜ್ಯಳಾಗಿರತಕ್ಕಂತ ನದಿ ಈಗಿನ ತುಂಗಭದ್ರಾ ನದಿ. ಉತ್ತರ ಭಾರತದಲ್ಲಿ ಅತ್ಯಂತ ಮಹತ್ವದ ಹಾಗೂ ಪವಿತ್ರವಾದ ನದಿಯಾಗಿ ಗಂಗಾನದಿ ಹರಿಯುತ್ತಿದ್ದರೆ, ದಕ್ಷಿಣ ಭಾರತದ ದಕ್ಷಿಣ ಕಾಶಿ ಎಂದೆ ಪ್ರಸಿದ್ಧಿ ಪಡೆದಿರುವ ಹಂಪಿಯ ತುಂಗಭದ್ರಾ ನದಿಯು ಸಹ ಒಂದೊಮ್ಮೆ ಇಷ್ಟೇ ಪ್ರಸಿದ್ಧಿ ಪಡೆದುಕೊಂಡಿದ್ದಿತ್ತು. ವಾರಣಾಸಿಯಷ್ಟೇ ಹಂಪಿಯು ಸಹ ಮಿಗಿಲಾದದ್ದು ಎಂದು ಹಾಗೂ ಗಂಗಾ ನದಿಯಷ್ಟೇ ತುಂಗಭದ್ರ ನದಿ ಸಹ ಪಾವನ ನದಿ ಎಂದು ಹಂಪಿಯ ಹರಿಹರ ಕವಿ ತನ್ನ ರಗಳೆಯಲ್ಲಿ ಬರೆದಿದ್ದಾನೆ. ಹೀಗೆ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತ ಉತ್ತರದ ಕಡೆ ತಿರುಗಿ ಚಕ್ರತೀರ್ಥದಲ್ಲಿ ಹರಿಯುತ್ತಾ ಮುಂದೆ ಹೋಗುತ್ತದೆ. ಈ ಕಾರಣಗಳಿಂದಾಗಿ ಅತ್ಯಂತ ಶ್ರೇಷ್ಠ ಮತ್ತು ಪೂಜ್ಯನೀಯವಾದದ್ದು ಹಂಪಿ ಹೊಳೆ ಎಂದು ಜನಪದರು ನಂಬಿಕೊಂಡು ಬಂದಿದ್ದಾರೆ. ಈ ನಂಬಿಕೆಯಲ್ಲೇ, ದಕ್ಷಿಣದ ಗಂಗಾ ನದಿ ಎಂದು ಹೊಳೆಯಲ್ಲಿ ಭಕ್ತರು ಮಿಂದು ಪಂಪಾ ವಿರೂಪಾಕ್ಷನ ದರ್ಶನವನ್ನು ಪಡೆಯುತ್ತಿದ್ದಾರೆ.

ಹಂಪಿಯ ಪ್ರದೇಶದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ತುಂಗಭದ್ರೆಯನ್ನು ಜಹ್ನಾವಿ ಎಂದು ಪುರಾಣದಲ್ಲಿ ಕರೆದಿದ್ದಾರೆ. ಹಂಪಿಯ ಈ ನದಿಯಲ್ಲಿ ಒಂದೊಮ್ಮೆ ರಾಮ ಲಕ್ಷ್ಮಣರು ಸ್ನಾನ ಮಾಡಿ ವಿರೂಪಾಕ್ಷನನ್ನು ಪೂಜಿಸಿದ ಬಗ್ಗೆ ಐತಿಹ್ಯ, ನಂಬಿಕೆ. ಇಂತಹ ಪವಿತ್ರವಾದ ನದಿಯನ್ನು ಈಗಲೂ ಜನ ಅಷ್ಟೇ ಧಾರ್ಮಿಕವಾಗಿ ಪೂಜಿಸುತ್ತಾ ಬಂದಿದ್ದಾರೆ. ದಿನವು ವಿರೂಪಾಕ್ಷನನ್ನು ತುಂಗಭದ್ರೆಯ ನೀರಿನಿಂದಲೇ ಜಲಾಭಿಷೇಕ ನೆರವೇರುತ್ತದೆ. ರಾಮಾಯಣದಿಂದ ಅಷ್ಟೇ ಏಕೆ ಪಾರ್ವತಿಯು ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ಶಿವ ಪಾರ್ವತಿಯರ ವಿವಾಹವಾದ ಈ ಸ್ಥಳವನ್ನು ಗಿರಿಜಾ ಕಲ್ಯಾಣ ಪ್ರದೇಶವೆಂದು ಕರೆಯುತ್ತಿದ್ದಾರೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Hampi Times E-paper
SCAN AND READ

ಹೀಗಾಗಿ ಈ ನದಿಯ ಸುತ್ತಲೂ ಅನೇಕ ತೀರ್ಥಗಳು ಸಿಗುತ್ತವೆ. ಅವುಗಳೆಂದರೆ ಮನ್ಮುಖ ತೀರ್ಥ, ಸೋಮತೀರ್ಥ, ಮಹಾಕಾಲ ತೀರ್ಥ, ತಾರಾ ತೀರ್ಥ, ಸೂರ್ಯ ತೀರ್ಥ, ರಭ್ಯತ ನಾಗತೀರ್ಥ, ಮಾರ್ಕಂಡೇ ತೀರ್ಥ, ಖಜಾಶ್ವತೀರ್ಥ ಕಾದಂಬರಿ ತೀರ್ಥ ಬ್ರಹ್ಮ ತೀರ್ಥ ಹೀಗೆ 11 ತೀರ್ಥಗಳು ಶಿವನ ಅಶ್ವಧನಗಳೆಂದು ಕರೆಯು ತ್ತಾರೆ.

ಮಹಾನದಿಶ್ವರಿಯಾದ ತುಂಗಭದ್ರೆಯಲ್ಲಿ ಉತ್ತಮ ವಶೇಷ್ಟಾಶ್ರಮವು ಇದೆ. ಅಲ್ಲಿ ಪಾಪ ವಿನಾಶನಿ ದಶಾಶ್ವಮೇಧ ವಿಧಾನದ ತೀರ್ಥ, ಬದರಿಕಾಸ್ತ್ರ ತೀರ್ಥ, ಶಬರಿ ಕಾಶ್ಮ ಕೋಟಿ ತೀರ್ಥ, ದೇವಘಾತ ಪಂಪಾಸರೋವರ ಹೀಗೆ ಅನೇಕ ತೀರ್ಥಗಳು ಕಂಡುಬರುತ್ತವೆ. ಪವಿತ್ರವಾದ ತುಂಗಭದ್ರೆಯ ಜೊತೆಗೆ ಹಲವಾರು ತೀರ್ಥಗಳಿಂದ ಪವಿತ್ರವಾದ ಪುಣ್ಯ ಭೂಮಿಯಾಗಿದೆ.

ಇಂಥ ಶ್ರೇಷ್ಠವಾದ ನದಿಯು ಚಿಕ್ಕಮಂಗಳೂರು ಜಿಲ್ಲೆ ಕುದುರೆಮುಖದ ಗಂಗಾ ಮೂಲದಲ್ಲಿ ಹುಟ್ಟಿ ನೂರಾರು ಕಿಲೋಮೀಟರ್‌ಗಳ ಹರಿಯುತ್ತಾ ಹಂಪಿಯ ಮೂಲಕ ಅರಬ್ಬಿ ಬಂಗಾಳಕೊಲ್ಲಿ ಸಮುದ್ರವನ್ನು ಸೇರುತ್ತ ಈ ನದಿಯು ತುಂಗಾ ಮತ್ತು ಭದ್ರಗಳ ಸಂಗಮದಿಂದ ತುಂಗಾಭದ್ರಾ ನದಿಯಾಗಿ ಹರಿಯುತ್ತಾ ಬರುತ್ತಾ ಶೃಂಗೇರಿಯ ಶಾರದಾಂಬೆಯ ಮಡಿಲಲ್ಲಿ ಹರಿಯುತ್ತಾ ಹಂಪಿಯವರಿಗೆ ಅನೇಕ ದೇವಸ್ಥಾನಗಳನ್ನು ದಾಟಿ ಹರಿಯುತ್ತಿದ್ದಾಳೆ. ಉಕ್ಕಡಗಾತ್ರಿ, ಕುರುವತ್ತಿ, ಮೈಲಾರ, ಸಿಂಗಟಾಲೂರು, ಮೊದಲಘಟ್ಟ, ಹುಲಿಗಿ ಹೀಗೆ ಧಾರ್ಮಿಕ ಕ್ಷೇತ್ರಗಳಲ್ಲಿ ಹರಿಯುತ್ತಾ ಹಂಪೆಗೆ ಬರುತ್ತಾಳೆ. ಇಲ್ಲಿ ಪಾವನೆ ನದಿಯಾಗಿ ಮುಂದೆ ಮಂತ್ರಾಲಯದ ರಾಯರ ಬಳಿ ಹರಿಯುತ್ತಾ, ಕೃಷ್ಣಾ ನದಿಯನ್ನು ಸೇರಿ ಬಂಗಾಳಕೊಲ್ಲಿ ಸಮುದ್ರ ಸೇರುತ್ತಾಳೆ. ಇಂಥ ಸುಧೀರ್ಘವಾಗಿ ಹರಿಯುವ ನದಿಯು ಗಂಗಾ ನದಿಗೆ ಸಮಾನವೆಂದು ನಮ್ಮ ಜನಪದರು ನಂಬಿಕೊಂಡು ಬಂದಿದ್ದಾರೆ. ಆದರೆ ನದಿಗಳನ್ನು ಜಪಿಸುವ ಮಂತ್ರದಲ್ಲಿ

**॥ ಗಂಗೇಚ ಯಮುನೇಚೈವ**
**ಗೋದಾವರಿ ಸರಸ್ವತಿ**
**ನರ್ಮದೇ ಸಿಂಧು ಕಾವೇರಿ**
**ಜಲೇಸ್ಮಿನ್ ಸನ್ನಿಧಿಂ ಕುರು ॥**

ಎಂದು ಸ್ಮರಿಸಲಾಗುತ್ತಿದೆ. ಆದರೆ ಕಾವೇರಿಯನ್ನು ಬಿಟ್ಟರೆ ಉಳಿದ ನದಿಗಳೆಲ್ಲವೂ ಉತ್ತರ ಭಾರತದಲ್ಲಿ ಹರಿಯುವಂತವೇ. ಆದರೆ ತುಂಗಭದ್ರೆ ಕೃಷ್ಣ ಅಂತ ಬೃಹತ್ ನದಿಗಳು ಇಂದಿಗೂ ವರ್ಷ ಪೂರ್ತಿ ಜೀವಂತವಾಗಿ ಹರಿಯುತ್ತಿವೆ. ಆದರೆ ಹಿಂದಿನ ಕಾಲಘಟ್ಟದಲ್ಲಿ ನಮ್ಮ ಈ ನದಿಗಳನ್ನು ಆ ನದಿಗಳ ಸಾಲಿಗೆ ಸೇರಿಸದೆ ಇರುವುದು ದುರದೃಷ್ಟಕರವಾಗಿದೆ.

ಸಂಸ್ಕೃತ ಮಂತ್ರಗಳಲ್ಲಿ ಬರುವ ಜಂಬೂದ್ವೀಪದ ಭರತಖಂಡೆ ಭರತ ವರ್ಷದ ಆಡಳಿತ ಪರಂಪರೆಯನ್ನು ಹಂಪಿಯು ಒಂದು ಕಾಲದಲ್ಲಿ ಹೊಂದಿತ್ತು ಎನ್ನಲಾಗುತ್ತಿದೆ.

ಪ್ರತಿವರ್ಷ ಜುಲೈ ಆಗಸ್ಟ್ ತಿಂಗಳಲ್ಲಿ ತುಂಗಭದ್ರ ನದಿ ತುಂಬಿ ಹರಿದು ಪ್ರವಾಹವನ್ನು ಉಂಟುಮಾಡುತ್ತದೆ. ಹೊಸಪೇಟೆ ಬಳಿಯ ಆಣೆಕಟ್ಟು ತುಂಬಿದಾಗ ಹೆಚ್ಚುವರಿ ನೀರನ್ನು ಬಿಟ್ಟಾಗ ಹಂಪಿ ಹೊಳೆಯು ತುಂಬಿ ಹರಿಯುತ್ತದೆ, ಬೆಟ್ಟ ಗುಡ್ಡಗಳನ್ನ ಮೈದೊಡವಿಕೊಂಡು ಹರಿಯುವ ದೃಶ್ಯ ಕಣ್ಮನಗಳನ್ನು ಸೆಳೆಯುತ್ತದೆ. ಈಗ ತುಂಬಿ ಹರಿಯುವ ಈ ಜಾಹ್ನವಿಯನ್ನು ಕಣ್ತುಂಬಿಕೊಳ್ಳುವುದೇ ಸೊಗಸು.

### ತಾಯಿ ತುಂಗಭದ್ರೆ

**ಶತಶತಮಾನಗಳಿಂದ ಹಂಪಿಯ ಕಿಷ್ಕಿಂದ ಅಂಜನಾದ್ರಿಗಳ**
**ನಡುವೆ ಹರಿಯುತ್ತಿದ್ದಾಳೆ ಅಶ್ವಿನಿ ರೋಹಿಣಿ ಕೃತ್ತಿಕಗಳಿಗೆ ಕೇಕೆ**
**ಹಾಕುತ್ತಾಳೆ ಮೈದಡವುತ್ತಾಳೆ ಬೆಟ್ಟ ಬಂಡೆ ಮಂಟಪ ಗುಡಿ**
**ಗುಂಡಾರಗಳನ್ನು ಮನೆ ಮಠ ಜೋಪಡಿಗಳನ್ನ**
**ಬಾಚಿಕೊಳ್ಳುತ್ತಾಳೆ.**
**ಕಣಕಣದಲ್ಲೂ ಬಿಸಿಲು ತಣಿಸುವ ಬಂಡೆಗಳ ಮೇಲೆ ಕಾಲಿಟ್ಟರೆ**
**ಪಾತಾಳ ನಾಭಿ ಸುಳಿ ಚಕ್ರತೀರ್ಥ,**
**ಕೋಟಿಲಿಂಗದ ಮೇಲೆ ಹರಿಯುತ್ತಾಳೆ ಕೋದಂಡರಾಮನ**
**ಪಾದಕ್ಕೆ ಪ್ರವಾಹವನ್ನು ಚಿಮ್ಮುತ್ತಾಳೆ ಪುರಂದರರ ಮಂಟಪದ**
**ಮೇಲೆ ಬೋರ್ಗರೆಯುತ್ತಾಳೆ**
**ತೆಲೆದೂಗುತ್ತಾಳೆ ಹಚ್ಚ ಹಸಿರು ಭತ್ತದ ತೆನೆಯಾಗಿ.**
**ಬಾಳೆಗೊನೆಗಳಿಗೆ ತೊಡೆ ನಲಗುತ್ತಾಳೆ.**
**ತೆಂಗುಗಳ ತುದಿಯಲ್ಲಿ ಸಿಹಿನೀರಾಗಿ ಹುದುಗುತ್ತಾಳೆ. ಸಾವಿರಾರು**
**ರೈತರು ಜೀವನಾಡಿಯಾಗಿದ್ದಾಳೆ ಒಮ್ಮೆ ಜುಳುಜುಳು**
**ನಿನಾದದೊಂದಿಗೆ ಸದ್ದಿಲ್ಲದೆ ಹಂಪಿಯ ಬಂಡೆಗಳ ಮಧ್ಯೆ**
**ಹರಿಯುತ್ತಿದ್ದರೆ, ಮುಂಗಾರಿನ ಮಳೆಗೆ ಕೇಕಿಹಾಕಿ**
**ಆರ್ಭಟಿಸುತ್ತಾಳೆ. ಚಪ್ಪನ್ನಾರು ಮಳೆ ಋತುಗಳನ್ನು**
**ಅಡಗಿಸಿಕೊಂಡು ಸುರಿಯುತ್ತಾಳೆ. ಕಡಲ ಕರೆಗೆ ಓಗೊಟ್ಟು**
**ಹರಿಯದಿರು ಚೆಲುವೆ ಈ ರೈತರ ಮರೆತು, ಕರುನಾಡ ಮರೆತು.**
**ಒಂದೊಮ್ಮೆ ಜಹ್ನಾವಿಯಾಗಿ ಪಂಪಾ ನದಿಯಾಗಿ ಹಂಪಿ**
**ಹೊಳೆಯಾಗಿ ಈಗ ತುಂಗಭದ್ರೆಯಾಗಿ ನೀನು**
**ಸದಾ ನಮ್ಮೊಂದಿಗೆ ಹರಿಯುತ್ತಿರು.**

**– ಎಂ.ಎಂ.ಶಿವಪ್ರಕಾಶ**

# ಕಾರ್ಗಿಲ್ ಕಥನ

ಈ ಸಾರಿ ಚಳಿಗಾಲದಲ್ಲಿ ಬಿದ್ದ ದಟ್ಟ ಹಿಮ ಬೇಗನೆ ಕರಗುತ್ತಿರುವ ಲಕ್ಷಣ ಕಾಣುತಿತ್ತು. ಹಿಮವಾಗಿದ್ದ ಸರೋವರದಲ್ಲಿ ಹನಿ ನೀರು ತೊಟ್ಟಿಕ್ಕುವ ಸದ್ದು. ಅದೆಲ್ಲೋ ದೂರದಲ್ಲಿ ನೀರ್ಗಲ್ಲು ಕರಗಿದ ಸದ್ದು. ಶಿಬಿರದಲ್ಲಿ ಬೆಚ್ಚಗೆ ಹೊದ್ದು ಮಲಗಿದ್ದ ನಮ್ಮ ತುಕಡಿಯ ಸದಸ್ಯರಿಗೆ ಏಕೋ ಎಲ್ಲವೂ ಎಂದಿನಂತಿಲ್ಲ ಎನಿಸುತ್ತಿತ್ತು. ಮುಂಜಾವು ಕಳೆದು ಒಂದು ಬಿಸಿಯಾದ ಟೀ ಕುಡಿದು ಕುಳಿತಿದ್ದೆವು. ಹಠಾತ್ತಾಗಿ ಬಂದು ಎರಗಿತು ಸುದ್ದಿ. ಸರಹದ್ದಿನ ಆಯಕಟ್ಟಿನ ಪರ್ವತ ಪ್ರದೇಶದಲ್ಲಿ ಮನುಷ್ಯರ ಚಟುವಟಿಕೆಗಳನ್ನು ಗಮನಿಸಿದ ಕುರಿಗಾಹಿಯೊಬ್ಬ ಸುದ್ದಿ ಅರುಹಿದ್ದ. ಶಿಬಿರದಲ್ಲಿ ಹಠಾತ್ ಚಲನ ವಲನಗಳು ಜೋರಾಗಿತ್ತು.ಚಳಿಗಾಲ ಮುಗಿಯುವ ಮೊದಲೇ ಹಿಮ ಮುಸುಕಿದ ಶಿಬಿರಗಳನ್ನು ಶತ್ರುದೇಶದ ಭಯೋತ್ಪಾದಕರು (ಪಾಕಿಸ್ತಾನಿ ಸೈನ್ಯದ ಸಹಕಾರದೊಂದಿಗೆ) ಆಕ್ರಮಿಸಿದ್ದಾರೆ ಎಂಬ ವಾರ್ತೆ ಖಚಿತವಾಗಿತ್ತು.ನಿನ್ನೆ ರಾತ್ರಿಯ ವಿಲಕ್ಷಣ ಭಾವ ನಿಜವಾದ ರೀತಿ ನನಗೆ ಅಚ್ಚರಿ ತರಿಸಿತ್ತು.

ಅದಾಗಲೇ ಬಂದಿತ್ತು ಆದೇಶ ನಮ್ಮ ತುಕಡಿಗೆ ಸರಹದ್ದಿನಲ್ಲಿ ಗಸ್ತು ತಿರುಗಿ ಪರಿಸ್ಥಿತಿಯನ್ನು ಅವಲೋಕಿಸಿ ವರದಿ ಒಪ್ಪಿಸುವ ಕೆಲಸ. ನಮ್ಮ ಬಂದೂಕುಗಳನ್ನು ಸರಿಮಾಡಿಕೊಂಡು ಹತ್ತು ಜನರಿದ್ದ ನಮ್ಮ ತುಕಡಿ ಸರಹದ್ದಿಗೆ ಸಮೀಪವಾಗಿತ್ತು. ಬಂಡೆಯ ಆಚೆ ಆಗಸವನ್ನೇ ಚುಂಬಿಸುವ ಹಿಮ ಪರ್ವತ. ಅದನ್ನು ಸುತ್ತಿ ಬಳಸಿ ಗಸ್ತು ತಿರುಗಬೇಕು. ಎರಡು ಹೆಜ್ಜೆ ಮುಂದಿಟ್ಟದ್ದೇ ದಢಾರನೆ ಸಿಡಿಯಿತು ಸದ್ದು.

ಪರ್ವತದ ಮೇಲಿನಿಂದ ಒಂದೇ ಸಮನೆ ಗುಂಡಿನ ಮಳೆ. ನನ್ನ ಜೊತೆಗಾರರು ಹಲವರು ಏನಾಗುತ್ತಿದೆ ಎಂದು ಅರಿಯುವಷ್ಟರಲ್ಲಿ ಧರಾಶಾಯಿಗಳಾಗಿದ್ದರು.

ಸಿಕ್ಕ ಬಂಡೆಯ ಮರೆಯಲ್ಲಿ ನಾನು ಗುಂಡುಹಾರಿಸ ತೊಡಗಿದೆ. ನನ್ನ ಜೊತೆಗಾರ ರೆಡಿಯೋಸೆಟ್ ನಿಂದ ಮುಖ್ಯ ಶಿಬಿರವನ್ನು ಸಂಪರ್ಕಿಸಿ ಆಗಿರುವ ಪರಿಸ್ಥಿತಿಯನ್ನು ವಿವರಿಸಲು ಹೆಣಗುತ್ತಿದ್ದ. ಗುಂಡಿನ ದಾಳಿ ಭಾರತ ದೇಶದ ನಮ್ಮ ಭೂ ಪ್ರದೇಶದಲ್ಲೇ ಆಗಿತ್ತು. ಕವರಿಂಗ್ ಫೈರ್ ಕೊಡುತ್ತಿದ್ದ ನಾನು ಗುರಿ ಸಾಧಿಸಿ ಇಬ್ಬರು ಭಯೋತ್ಪಾದಕರನ್ನು ಹೊಡೆದು ಹಾಕಿದೆ. ಆಗ ಸಿಡಿಯಿತು ದುಷ್ಮನ್‌ನ ಗ್ರೇನೇಡ್. ತಕ್ಷಣದಲ್ಲೇ ರೇಡಿಯೋಸೆಟ್ ಚೂರಾಗಿತ್ತು. ನನ್ನ ಜೊತೆಗಾರ ಹೆಣವಾಗಿದ್ದ. ಗ್ರೇನೆಡ್ ಚೂರುಗಳು ನನ್ನ ಮುಂಗಾಲುಗಳನ್ನು ಸೀಳಿ ಹಾಕಿದ್ದವು. ಹತ್ತಿರವಿದ್ದ ಇಬ್ಬರ ಸಹಾಯದಿಂದ ಫೈರಿಂಗ್ ಮಾಡುತ್ತಾ ತೆವಳುತ್ತಾ ಹಿಂದೆ ಬಂದು ಬೆಂಗಾವಲಿಗೆ ಬರುತ್ತಿದ್ದ ತುಕಡಿಗೆ ಕೈ ಬೀಸಿ ಕರೆದಿದ್ದೆ ಅದೇ ನನ್ನ ಕೊನೆಯ ನೆನಪು.

ನಂತರ ನಾನು ಕಣ್ಬಿಟ್ಟಾಗ ಆಸ್ಪತ್ರೆಯಲ್ಲಿದ್ದೆ. ಕಾಲಿಗೆ ದೊಡ್ಡ ಬ್ಯಾಂಡೇಜ್ ಕಟ್ಟಿದ್ದರು. ನಮ್ಮ ಮೇಲಾದ ಗುಂಡಿನ ದಾಳಿ ಶತ್ರುದೇಶದ ನೀಚತನವನ್ನು ಬಯಲು ಮಾಡಿತ್ತು. ಕಾರ್ಗಿಲ್ ಕದನ ಬಾಯ್ದೆರೆದಿತ್ತು. ಮೊದ ಮೊದಲಂತೂ ನಮ್ಮ ಸೈನಿಕರಿಗೆ ನನಗಾದ ಪರಿಸ್ಥಿತಿಯೇ ಕಾರ್ಗಿಲ್, ದ್ರಾಸ್ ಬಟಾಲಿಕ್ ಗಡಿಗಳಲ್ಲಿ ಅಗ್ನಿವರ್ಷ. ಭೋಫೋರ್ಸ್ ಭೋರ್ಗರೆದಿತ್ತು. ಹಲವು ಜೊತೆಗಾರರ ಬಲಿದಾನದ ನಂತರ ಯುದ್ಧ ನಮ್ಮ ಕಡೆ ತಿರುಗಿತ್ತು. ಟೋಲೋಲಿಂಗ್, ಟೈಗರ್ ಹಿಲ್ ಮುಂತಾಗಿ ಆಯಕಟ್ಟಿನ ಪ್ರದೇಶ ಗಳಲ್ಲಿನ ದುಷ್ಮನ್ ನಮ್ಮ ಸೈನಿಕರ ವೀರಾವೇಶದ ಮುಂದೆ ಮಂಡಯೂರಿ ಹತನಾಗಿದ್ದ ಕಾರ್ಗಿಲ್ ಯುದ್ಧ ವಿಜಯ ಮಾಲೆಯನ್ನು ಭಾರತಮಾತೆಗೆ ಸೈನಿಕರು ತೊಡಸಿದ್ದರು.



ಆಸ್ಪತ್ರೆಯಿಂದ ಬಿಡುಗಡೆಯಾದ ನನಗೆ ವೀರಚಕ್ರ ಘೋಷಣೆಯಾದ ಪತ್ರವನ್ನು ಕೊಡಲಾಯಿತು. ಅದರ ಅಕ್ಷರಗಳಲ್ಲಿ ನನ್ನ ಜೊತೆಗಾರರ ನೆತ್ತರಿನ ಬಿಂದುಗಳೇ ಕಂಡಂತಾಯಿತು. ತಾಯಿ ಭಾರತಿಯ ಮಾನಕಾಯ್ದ ನನ್ನ ಸಹ ಸೈನಿಕರ ಬಲಿದಾನ ಎಂದೂ ಅಮರ ಎಂದು ಗದ್ಗದಿತನಾದೆ.

ಒಬ್ಬ ವೀರ ಯೋಧ ಕಾರ್ಗಿಲ್ ಯುದ್ಧದ ವಿಜಯೋತ್ಸವದ ದಿನ ಯುದ್ಧದ ಸಂದರ್ಭ ದಲ್ಲಿ ನಡೆದ ಘಟನೆಗಳನ್ನು ಮೆಲುಕು ಹಾಕುತ್ತಾ ತನ್ನ ಪದಕಕ್ಕೆ ಸೆಲ್ಯೂಟ್ ಹೊಡೆದು ಯುದ್ಧದ ಗೆಲುವಿನ ದಿನವನ್ನು ಸಂಭ್ರಮಿಸಿದನು.



– ಚೇತನ ಭಾರ್ಗವ ಬೆಂಗಳೂರು

## ಕವಿ ಮನಸು

### ಮತ್ತೊಮ್ಮೆ ಬಾ ತಂದೆ



ಗೋವಿಂದ ಹರಿಗೋವಿಂದ ಹರಿಗೋವಿಂದ
ನಿನ್ನ ನಾಮ ಸ್ಮರಣೆಯಿಂದ ಮನಕಾನಂದ
ಹರಿಯೆ ನಿನ್ನ ಕರುಣೆಯಿಂದ
ನಮಗಾನಂದ॥ಪ॥

ಬೇಡಲು ಬಂದಿರುವೆ ಬಾಳಲಿ ನೋವಿಂದ
ಕರುಣದಿ ಪರಿಹರಿಸೊ ಹರಿ ಗೋವಿಂದ
ಮರೆತೆನು ಬದುಕಿನಲಿ ಗೋವಿಂದ
ನೆನೆಯದೆಲೆ
ನೀ ಬಂದು ಮನ್ನಿಪುದು ಶ್ರೀ ಗೋವಿಂದ
ಕಷ್ಟದಿ ಸಿಲುಕಿರುವೆ ನಿನ್ನಯ ದಯೆ ಇರಲಿ


ದೂರ ತಳ್ಳಿ ನೋಯಿಸದೆ ಬಾ ಒಲವಿಂದ
ಹರಿಯೆ ನಿನ್ನ ದಯೆಗಾಗಿ ನಾನಿಂದು ಬಂದೆ॥

ಮಾನವ ರೂಪಿಂದ ದೇವಕಿ ಉದರದಲಿ
ಧರೆಯೊಳು ಅವತರಿಸಿ ಬಂದೇ ತಂದೆ
ಪುನರಪಿ ನೀನಿಲ್ಲಿ ತಾಳೆಯ ಅವತಾರ
ಲೋಕವು ಉಳಿಯುವುದು ಹರಿ ನಿನ್ನಿಂದೇ
ಅಚ್ಚುತನೆ ಗಿರಿಧರನೆ ಮಣಿದಿರುವೆ ಚರಣದಲಿ

ಬೇಡಿ ನಿಂದೆ ಕರಮುಗಿದು ನಾ ಭಕ್ತಿಯಿಂದ
ಹೃದಯ ಇಂದು ಮಿಡಿಯುತಿದೆ
ಹರಿನಾಮದಿಂದ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಬಿಡುವಾದಾಗ ಬ್ರಹ್ಮ ಸೃಷ್ಟಿಸಿದನೇ



ಬಿಡುವಾದಾಗ ಬ್ರಹ್ಮ ನಿನ್ನ ಸೃಷ್ಟಿಸಿದನೇ
ಬೆಡಗಿಯ ಬಿನ್ನಾಣಕೆ ಮಾರು ಹೋದನೇ
ಒಪ್ಪ ಓರಣವು ನಿನ್ನ ಮುಖಾರವಿಂದ
ನೋಡುತ್ತ ನಾಚುತ್ತ ನಿಂತಿಹನು ಅರವಿಂದ

ಕರ ತುಂಬಾ ಬಳೆ, ಐಸಿರಿಯ ಹೊಳೆ
ಮುಖದ ತುಂಬಾ ಕಂಡಿಹೆನು ರಾಣಿಕಳೆ
ಸವಿದಷ್ಟು ಸವಿವಾಸೆ ನಿನ್ನಧರಗಳ ಪಸೆ
ದೂರವಾಗದಿರು ನೀನೆನ್ನ ಮನದರಸಿ

ಯಾರ ಕಡೆಗೆ ಹೋಗಿದೆ ನಿನ್ನ ಗಮನ
ಯಾರ ಅರಸುತಿವೆ ಸುಂದರ ನಯನ
ಕಾದಿವೆ ನಯನ ಯಾರದೋ ಆಗಮನ
ಚಿಂತಿಸದಿರು ಚೆಲುವೆ ಕ್ಷಣಿಕವು ವಿರಹವೇದನ

ನಭದಲ್ಲಿ ಹೊಳೆದಿವೆ ಚುಕ್ಕಿಗಳು ಸಾವಿರಾರು
ಎನ್ನ ಮನಕೆ ಬರಲಿಲ್ಲ ಚುಕ್ಕಿ ಒಂದಾದರೂ
ಮನವಾಸೆಪಟ್ಟಿದೆ ನಿನ್ನ ಮೇಲೆ ಬಲು ಜೋರು
ಮನ ಮನೆ ತುಂಬಿಸಿಕೊಳ್ಳುವೆ ದಯೆ ತೋರು

– ಕೆ ಎಂ ಬಸವರಾಜ ಹೊಸಪೇಟೆ

ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

# ಕಾರ್ಗಿಲ್ ಯುದ್ಧ ಮತ್ತು ವೀರಯೋಧ ಮಲ್ಲಯ್ಯ ಮೇಗಳಮಠ

ಕಾರ್ಗಿಲ್ ಸಂಘರ್ಷವೆಂದು ಹೆಸರಾದ ಕಾರ್ಗಿಲ್ ಯುದ್ಧವು ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಸಂಘರ್ಷವಾಗಿದ್ದು, ಕಾಶ್ಮೀರದ ಕಾರ್ಗಿಲ್ ಜಿಲ್ಲೆ ನಿಯಂತ್ರಣ ರೇಖೆ ಇರುವ ಪ್ರದೇಶಗಳಲ್ಲಿ 1999 ಮತ್ತು ಜುಲೈ ನಡುವೆ ಸಂಭವಿಸಿತು. ಇದು ಈ ಪ್ರದೇಶದಲ್ಲಿನ ಭಾರತೀಯ ಸೇನಾ ಕಾರ್ಯಾಚರಣೆಯ ಸಂಕೇತವಾಗಿದೆ. ಭಾರತೀಯ ವಾಯುಪಡೆಯು ಭಾರತೀಯ ಸೇನೆಯೊಂದಿಗೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಪಾಕಿಸ್ತಾನ ಸೇನೆ ಮತ್ತು ಅರೆ ಸೇನಾ ಪಡೆಗಳನ್ನು ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಖಾಲಿಯಾದ ಭಾರತೀಯ ಸ್ಥಾನಗಳಿಂದ ಹೊರಹಾಕಿತ್ತು.ಇದನ್ನು ಆಪರೇಷನ್ ಸಫೇದ್ ( ಬಿಳಿ ಸಾಗರ) ಎಂದು ಹೆಸರಿಸಲಾಯಿತು.

3 ನೇ ಮೇ1999 ರಿಂದ ಹಿಡಿದು ಜುಲೈ 26 19 99 ರವರೆಗೆ ಕಾರ್ಗಿಲ್ ಜಿಲ್ಲೆ ಜಮ್ಮು ಮತ್ತು ಕಾಶ್ಮೀರ ಈ ಪ್ರದೇಶಗಳಲ್ಲಿ ನಡೆಯಿತು. ಅಷ್ಟೂ ದಿನಗಳ ಹೋರಾಡಿದ ಯೋಧರಿಗೆ ಗೆಲುವಿನ ಹೊನಲು ಹರಿಯಿತು. ಆದರೆ ಅಲ್ಲಿದ್ದ ಯೋಧರಿಗೆ ಕಾರ್ಗಿಲ್ ವಿಜಯೋತ್ಸವ ಆಚರಿಸುವುದಕ್ಕಿಂತ ಹೆಚ್ಚಿನ ದುಃಖದಲ್ಲಿದ್ದರು. ಏಕೆಂದರೆ ತಮ್ಮೊಂದಿಗೆ ಜೊತೆಗೂಡಿ ಹೋರಾಡಿದ ಭಾರತೀಯ ವೀರ ಸೇನಾನಿಗಳನ್ನು ಕಳೆದುಕೊಂಡು ದುಃಖದಲ್ಲಿದ್ದರು. ಯುದ್ಧ ನಡೆದಾಗ ಅದರ ಮಾಹಿತಿಯನ್ನು ಮಾಧ್ಯಮದಲ್ಲಿ ನಾವು ವೀಕ್ಷಿಸುತ್ತಿದ್ದಾಗ ಮೈ ಜುಮ್ ಎನ್ನುತ್ತಿತ್ತು .ಮನೆ, ಊರು,ತಂದೆ,ತಾಯಿ,ಹೆಂಡತಿ,ಮಕ್ಕಳನ್ನು ಬಿಟ್ಟು ಯುದ್ಧಕ್ಕೆ ಹೋದ ಯುವ ಯೋಧರೆಲ್ಲ ದೇಶಕ್ಕಾಗಿ ಪ್ರಾಣವನ್ನು ಅರ್ಪಿಸಿದ ಕಥೆ ಕೇಳುತ್ತಿದ್ದರೆ ರೋಮಾಂಚನವಾಗುತ್ತದೆ. ನಾನು ಇತ್ತೀಚಿಗೆ ಚಕ್ರವರ್ತಿ ಸೂಲಿಬೆಲೆಯವರ ಆತ್ಮವಿಶ್ವಾಸ ತುಂಬಿದ ಕಾರ್ಗಿಲ್ ಯುದ್ಧ ಕುರಿತು ಮಾತನಾಡಿದ ಮಾತುಗಳನ್ನು ಕೇಳುತ್ತಿದ್ದರೆ ಮೈ ನೆವಿರೆಳಿಸುತ್ತದೆ. ಸ್ವತಃ ಎಷ್ಟೋ ಯೋಧರು ಜೀವಂತವಾಗಿ ಮರಳಿ ಬಂದಿದ್ದಾರೆ. ಅಂತವರು ಮಾತುಗಳನ್ನು ಆಲಿಸಿದರೆ ಅವರು ಪಟ್ಟ ಕಷ್ಟ ಕೋಟಲೆಗಳನ್ನು ನೋಡಿದಾಗ ಅವರಿಗೆ ಇದ್ದ ದೇಶ ಪ್ರೇಮ ದೇಶಾಭೀಮಾನ ಎದ್ದು ಕಾಣುತ್ತದೆ. ನವೀನ್ ನಾಗಪ್ಪ ಅವರ ಮಾತುಗಳನ್ನು ಕೇಳಿದಾಗ ಕಾರ್ಗಿಲ್ ಯುದ್ಧ ನಡೆದದ್ದು ಹೇಗೆ? ಏಕೆ? ಸ್ವತಃ ಯೋಧರು ಅನುಭವಿಸಿದ ಯಾತನೆಗಳನ್ನು ಬಿಡಿಸಿ ಬಿಡಿಸಿ ಹೇಳಿದ್ದಾರೆ.



ಉಮಾ ಗವೀಶ ಕಲಠ
ಶಿಕ್ಷಕಿ, ಅಳವಂಡಿ

Hampi Times E-paper
SCAN AND READ

ಕಾರ್ಗಿಲ್ ಪರ್ವತಗಳನ್ನು ಯೋಧರು ಬೇಸಿಗೆವೇಳೆಗೆಆಕ್ರಮಿಸುತ್ತಿದ್ದು,ಮುಂದೆ ಚಳಿಗಾಲದಲ್ಲಿ ಪರ್ವತಗಳೆಲ್ಲ ಹಿಮಾಚ್ಛಾದಿತವಾಗುತ್ತಿದ್ದಂತೆ ಇಳಿಯುತ್ತಿದ್ದರು. ಅದೇ ರೀತಿ ಪಾಕಿಸ್ತಾನದ ಯೋಧರು ಬೇಸಿಗೆಯಲ್ಲಿ ತಮ್ಮ ಭಾಗದ ಪರ್ವತಗಳನ್ನ ಏರಿ ಅಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಹೀಗಿರುವಾಗ ಅದು 1999ರ ಸಮಯ ಇನ್ನೇನು ನಮ್ಮ ದೇಶದ ಯೋಧರು ನಮ್ಮ ದೇಶದ ಪರ್ವತಗಳನ್ನು ಏರಬೇಕೆಂದು ಕೊಳ್ಳುತ್ತಿದ್ದಂತೆ ಪಾಕಿಸ್ತಾನದ ಯೋಧರು ಅದೇ ಗೋ ನಮ್ಮ ದೇಶದ ಗಡಿ ದಾಟಿ ನಮ್ಮ ದೇಶದ ಪರ್ವತಗಳನ್ನು ಆಕ್ರಮಿಸಿಕೊಂಡಿದ್ದರು. ಅವರನ್ನು ಮಟ್ಟ ಹಾಕಲು ಹೇಗೆ ನಾವು ಅವರನ್ನು ಆಕ್ರಮಿಸಬೇಕು ಹೇಗೆ ಎಲ್ಲಿಂದ ನಾವು ಅವರನ್ನು ನಾಶ ಮಾಡಬೇಕು ಎಂಬುದನ್ನು ತಿಳಿಯಲು ಐದು ಜನ ಯೋಧರು ಪರ್ವತವನ್ನು ಏರಲು ಶುರು ಮಾಡಿದರು. ಅದೇ ಅವರಿಗೆ ಪಾಕಿಸ್ತಾನದ ಸೈನಿಕರು ತಮ್ಮ ಪರ್ವತಗಳನ್ನು ಆಕ್ರಮಿಸಿಕೊಂಡಿದ್ದು ತಿಳಿಯಿತು ಆದರೂ ಎದೆಗುಂದದೆ ಪರ್ವತಹತ್ತಿ, ಅಡಗಿ ಕುಳಿತರು. ಪಾಕ್ ಸೈನಿಕರಿಗೆ ಇವರ ಸುಳಿವು ಗೊತ್ತಾಗಿ ಇವರ ಮೇಲೆ ದಾಳಿ ನಡೆಸಿದರು. ಇವರಲ್ಲಿದ್ದ ಅಲ್ಪಸ್ವಲ್ಪ ಮದ್ದುಗುಂಡಗಳನ್ನು ಬಳಸಿದರೂ ಸಹ ಅವರನ್ನು ಗೆಲ್ಲಲಾಗಲಿಲ್ಲ. ಪಾಕ್ ಸೈನಿಕರು ಈ ಐದು ಜನ ಸೈನಿಕರನ್ನು ಬಂಧಿಸಿದರು. ಸುಮಾರು 70 ರಿಂದ 80 ಜನ ಸೈನಿಕರಿದ್ದ ಪಾಕಿಸ್ತಾನವು ಭಾರತೀಯ ಸೈನಿಕರನ್ನು 21 ದಿನಗಳವರೆಗೂ ಯುದ್ಧ ಕೈದಿಗಳನ್ನಾಗಿ ಸೆರೆ ಹಿಡಿದರು. ಯುದ್ಧ ನೀತಿಯಂತೆ ಅವರನ್ನು ನೋಡಿಕೊಳ್ಳದೇ ಅವರನ್ನು ಚಿತ್ರಹಿಂಸೆಗೆ ಒಳಪಡಿಸಿ ಅವರನ್ನು ಕೊಂದು ಹಾಕಿ, ಅವರ ಶವಗಳನ್ನು ನಮ್ಮ ದೇಶಕ್ಕೆ ಕಳುಹಿಸಿಕೊಟ್ಟರು. ನಮ್ಮ ಯೋಧರನ್ನು ಅತ್ಯಂತ ಹೀನಾಯವಾಗಿ ಕಂಡು,ಅವರ ಹಲ್ಲುಗಳನ್ನು ಮುರಿದು ಕಣ್ಣುಗಳನ್ನು ಕಿತ್ತು ಸಿಗರೇಟ್ ನಿಂದ ಮೈಯನ್ನೆಲ್ಲ ಸುಟ್ಟು ಹೀನಾಯ ರೀತಿಯಲ್ಲಿ ಅವರನ್ನು ಕೊಂದು ನಮ್ಮ ದೇಶಕ್ಕೆ ಅವರ ಶವವನ್ನು ಸಾಗಿಸಿದಾಗ ಸಹಜವಾಗಿಯೇ ನಮ್ಮ ಭಾರತೀಯ ಸೈನಿಕರು ರೊಚ್ಚಿಗೆದ್ದರು. ಭಾರತೀಯ ಸೈನಿಕರಿಗಷ್ಟೇ ಅಲ್ಲ ಇಡೀ ವಿಶ್ವವೇ ಬೆಚ್ಚಿ ಬೀಳುವಂತೆ ಮಾಡಿತು.

ಎಷ್ಟೋ ನಮ್ಮ ಯೋಧರು ಹಸಿವೆ ನೀರಡಿಕೆಗಳನ್ನು ಲೆಕ್ಕಿಸದೆ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಬಲಿಕೊಟ್ಟಿದ್ದಾರೆ. ಅಂತವರ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದ ವೀರಯೋಧ ಮಲ್ಲಯ್ಯ ಮೇಗಳ ಮಠರವರು ಒಬ್ಬರು. ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಅವರು ನಮ್ಮೂರಿನ ಹೆಮ್ಮೆಯಾಗಿದ್ದಾರೆ.

**ಮಲ್ಲಯ್ಯ ಮೇಗಳ ಮಠ ರವರ ಕಿರುಪರಿಚಯ:**

ಅಳವಂಡಿ ಗ್ರಾಮದ ಚನ್ನಬಸಯ್ಯ ಹಾಗೂ ಗಂಗಮ್ಮ ದಂಪತಿಗಳಿಗೆ ಆರು ಜನ ಮಕ್ಕಳು ನಾಲ್ಕು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. 1963 ರಲ್ಲಿ ಜನಿಸಿದ ಮಲ್ಲಯ್ಯ ಐದನೇ ಮಗುವಾಗಿ ಜನಿಸಿದರು. ಬಡತನದಲ್ಲಿ ಹುಟ್ಟಿ ಬಡತನದಲ್ಲಿಯೇ ಬೆಳೆದ ಇವರಿಗೆ ಅಗಾಧವಾದ ಬುದ್ಧಿ ಚಾತುರ್ಯ ಸಾಂಸ್ಕೃತಿಕ ಕೌಶಲ್ಯತೆ. ಕಲಾ ನೈಪುಣ್ಯತೆಯನ್ನು ಹೊಂದಿದ್ದರು. ಇವರು ಕೈಗೆ ಕುಂಚವನ್ನು ಹಿಡಿದರೆಂದರೆ ಅತ್ಯದ್ಭುತವಾದ ಚಿತ್ರಗಳನ್ನು ಬಿಡಿಸುತ್ತಿದ್ದರು. ಮುಂದೆ ಇವರು "ಸಾಧನೆಗೆ ಅ ಸಾಧ್ಯವಾದದ್ದು ಯಾವುದು ಇಲ್ಲ "ಎಂಬಂತೆ ಕಾಲ್ನಡಿಗೆಯಿಂದಲೇ ಅಳವಂಡಿಯಿಂದ ಹೊಸಪೇಟೆ ವರೆಗೂ ನಡೆದು ಸೈನಿಕ ಹುದ್ದೆ ಭರ್ತಿ ಕಾರ್ಯದಲ್ಲಿ ಭಾಗವಹಿಸಿ 1980 ರಲ್ಲಿ ಸೈನಿಕನಾಗಿ ಸೇವೆಗೆ ಸೇರಿದರು. ಕುಂಚ ಹಿಡಿದ ಕೈಯಲ್ಲಿ ಗನ್ ಹಿಡಿದು ದೇಶ ರಕ್ಷಣೆಯ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಮುಂದೆ 1989 ರಲ್ಲಿ ಸರೋಜಾ ಎಂಬುವರನ್ನು ಮದುವೆಯಾದರು.ಮುಂದೆ ಜಮ್ಮುವಿನಲ್ಲಿದ್ದರೂ ಮನೆಯವರಿಗೆಲ್ಲಾ ಪತ್ರದ ಮೂಲಕ ತಾಯಿ,ಸಹೋದರ, ಸಹೋದರಿಯರು ಮತ್ತು ಹೆಂಡತಿ ಮಕ್ಕಳನ್ನು ವಿಚಾರಿಸುತ್ತಿದ್ದರು. ರಜೆ ಸಿಕ್ಕಾಗಲ್ಲ ಊರಿಗೆ ಬಂದು ಕುಟುಂಬದೊಂದಿಗೆ ಸ್ನೇಹಿತರೊಂದಿಗೆ ಸಂತೋಷವಾಗಿ ಕಾಲ ಕಳೆದು ಮರಳುತ್ತಿದ್ದರು. ರಜೆ ಮುಗಿಸಿ ಸೇವೆಗೆ ತೆರಳಿದ ಮಲ್ಲಯ್ಯ ಕಾರ್ಗಿಲ್ ಯುದ್ಧ ಶುರುವಾಗುತ್ತಿದ್ದಂತೆ ಅದರಲ್ಲಿ ಪಾಲ್ಗೊಂಡರು. ಪ್ರತಿಯೊಬ್ಬ ಸೈನಿಕರು ಪಾಕಿಸ್ತಾನ ಸೈನಿಕರ ವಿರುದ್ಧ ಜೀವದ ಹಂಗು ತೊರೆದು ಹೋರಾಡಿದರು. ಎಷ್ಟೋ ಸೈನಿಕರು ವೀರ ಮರಣ ಹೊಂದಿ ಅಜರಾಮರರಾದರು. ಜುಲೈ ಮೂರರ ರಾತ್ರಿ ಕೊಪ್ಪಳಕ್ಕೆ ಮಲ್ಲಯ್ಯನವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಊರಿಗೆ ಊರೇ ಕಣ್ಣೀರ್ ಹಾಕಿತು. ಅಷ್ಟೇ ಹೆಮ್ಮೆಪಟ್ಟುಕೊಂಡಿತ್ತು.ನಮ್ಮೂರಿನ ವೀರಯೋಧ ಅಜರಾಮರರಾಗಿದ್ದಕ್ಕೆ. ಜುಲೈ 5ಕ್ಕೆ ಮಲ್ಲಯ್ಯನವರ ಪಾರ್ಥಿವ ಶರೀರವನ್ನು ಕೊಪ್ಪಳದಿಂದ ಅಳವಂಡಿಗೆ ತಂದು ಸಾರ್ವಜನಿಕರ ದರ್ಶನಕ್ಕೆ ಅನುವು ಮಾಡಿಕೊಟ್ಟಿದ್ದರು. ನಂತರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಹಂತದ ಎಲ್ಲಾ ಅಧಿಕಾರಿಗಳು ಕೆಲವರು ಸೈನಿಕರು ಆಗಮಿಸಿ ಎಲ್ಲ ಸರಕಾರಿ ಗೌರವದೊಂದಿಗೆ ಅಂತ್ಯಸಂಸ್ಕಾರ ಮಾಡಲಾಯಿತು ನನಗೆ ಇನ್ನೂ ನೆನಪಿದೆ ನಾನು ಸೇವೆಗೆ ಸೇರಿ ಕೇವಲ 11 ತಿಂಗಳಾಗಿತ್ತು ನಮ್ಮ ಶಾಲಾ ಮಕ್ಕಳನೆಲ್ಲ ಕರೆದುಕೊಂಡು ಕಾರ್ಗಿಲ್ ನಿಧಿ ಸಂಗ್ರಹಿಸಿ ಕಳಿಸಿ ಕೊಟ್ಟಿದ್ದೆವು.



ಕಾರ್ಗಿಲ್ ಕದನವಾಗಿ ಇಷ್ಟು ವರ್ಷಗಳಾಗಿದ್ದರು ನಮ್ಮೂರಿನಲ್ಲಿ ಮಲ್ಲಯ್ಯ ಮೇಗಳಮಠ ರವರ ಸಮಾಧಿ ಯಾವುದು ಪ್ರಗತಿ ಕಂಡಿಲ್ಲ.ಇಡೀ ಈಗಿನ ಹೈದರಾಬಾದ್ ಕರ್ನಾಟಕಕ್ಕೆ ಕೇವಲ ಒಬ್ಬ ವೀರಯೋಧ ಮಲ್ಲಯ್ಯನವರು ಕಾರ್ಗಿಲ್ ಯುದ್ಧದಲ್ಲಿ ಮಡಿದವರು ಆದರೂ ಅವರ ಸಮಾಧಿಯ ಮೇಲೆ ಅವರ ಮೂರ್ತಿ ಪ್ರತಿಷ್ಠಾಪಿಸಿಲ್ಲ. ಈಗಲಾದರೂ ಸರಕಾರ ಅವರ ಸಮಾಧಿಯ ಮೇಲೆ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅದಕ್ಕೆ ಮೇಲ್ಚಾವಣಿಯನ್ನು ಮಾಡಿಸಿದರೆ ಅಲ್ಲಿ ಹಾದು ಹೋಗುವರೆಲ್ಲರಿಗೂ ಮಲ್ಲಯ್ಯನವರ ಸಮಾಧಿಯನ್ನು ಆದರೂ ನೋಡಿ ಅವರಿಗೆ ಅಲ್ಲಿಂದಲೇ ಒಂದು ನಮನವನ್ನು ಸಲ್ಲಿಸಬಹುದು ಎಂಬುದು ಊರಿನವರೆಲ್ಲರ ಆಸೆಯಾಗಿದೆ. ಪ್ರತಿ ವರ್ಷ ಜುಲೈ 26 ಕಾರ್ಗಿಲ್ ವಿಜಯೋತ್ಸವ ಆಚರಿಸುತ್ತಿರುವುದು ನಮಗೆಲ್ಲ ಒಂದು ಹೆಮ್ಮೆಯ ವಿಷಯವಾದರೂ ಅದರಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಅಷ್ಟೇ ಮುಖ್ಯವಾಗಿದೆ. ಜೈ ಹಿಂದ್. ಜೈ ಜವಾನ್.

# ನಂಬಿಕೆಯ ಭರವಸೆ

ಸ್ಟ್ಯಾನಲಿ ಪ್ರಖ್ಯಾತ ಇಂಗ್ಲಿಷ್ ಕಾಮಿಕ್ ಪುಸ್ತಕಗಳ ಕರ್ತೃ. ಹಲವಾರು ಕಾಮಿಕ್ ಹೀರೋಗಳನ್ನು ಸೃಷ್ಟಿಸಿದ ಸ್ಟ್ಯಾನ್ಲಿಯನ್ನು ಒಂದು ದಿನ ಆತನ ಕಾಮಿಕ್ ಸರಣಿಯನ್ನು ಮುದ್ರಿಸುತ್ತಿದ್ದ ಮಾರ್ವೆಲ್ ಕಾಮಿಕ್‌ನ ಪ್ರಕಾಶಕ ಆತನ ಆಫೀಸಿಗೆ ಬಂದು ಹೊಸದಾಗಿ ಮತ್ತೊಬ್ಬ ಕಾಮಿಕ್ ಹೀರೊನನ್ನು ಸೃಷ್ಟಿಸಲು ಕೇಳಿಕೊಂಡ.

ಇದಕ್ಕೆ ಒಪ್ಪಿ ಯಾರನ್ನು ಹೊಸದಾಗಿ ಹೀರೋ ಮಾಡಬೇಕೆಂದು ಯೋಚಿಸುತ್ತಾ ತನ್ನ ಒರಗು ಕುರ್ಚಿಯಲ್ಲಿ ಹಿಂದಕ್ಕೆ ಒರಗಿದ ಸ್ಟಾನ್‌ಲೀ ಗೆ ಗೋಡೆಯನ್ನು ಮೇಲೇರುತ್ತಾ ಹೊರಟ ಕೀಟವೊಂದು ಕಾಣಿಸಿತು. ಕೂಡಲೇ ಆ ಕೀಟವನ್ನೇ ಹೀರೋ ಆಗಿ ಚಿತ್ರಿಸಿದರೆ ಹೇಗೆ ಎಂಬ ಭಾವಲೀಯಲ್ಲಿ ಮೂಡಿತು.

ಓರ್ವ ಮಧ್ಯಮ ವರ್ಗದ ಹರೆಯದ ಯುವಕ ತನ್ನೆಲ್ಲ ವೈಯುಕ್ತಿಕ ಸಮಸ್ಯೆಗಳನ್ನು ಎದುರಿಸುತ್ತಲೇ, ದುಷ್ಟರೊಂದಿಗೆ ಹೋರಾಡುವ ಚಿತ್ರಣವನ್ನು ಕಲ್ಪಿಸಿಕೊಂಡ ಆತ ಮುಂದಿನ ಒಂದೆರಡು ದಿನಗಳಲ್ಲಿ ಮಾರ್ವೆಲ್ ಕಾಮಿಕ್ ನ ಪ್ರಕಾಶಕನಿಗೆ ಕರೆ ಮಾಡಿ ಕಥೆಯ ವಿವರಗಳನ್ನು ತಿಳಿಸಿದ. ಕೂಡಲೇ ಮಾರ್ವೆಲ್ ನ ಪ್ರಕಾಶಕ ಬೇಸರದಿಂದ ಇದು ಅತ್ಯಂತ ನಿರುಪಯುಕ್ತವಾದ ಕಥೆ ಎಂದೂ, ಕೂಡಲೇ ಈ ಕತೆಯನ್ನು ಕೈಬಿಡಬೇಕೆಂದು ತಿರಸ್ಕಾರದಿಂದ ಹೇಳಿದ. ಸಹಜವಾಗಿ ಲೀಗೆ ಬೇಸರವಾಗಿ ಆತ ಈ ಕಥೆಯನ್ನು ಬಿಟ್ಟುಬಿಡಲು ಯೋಚಿಸಿದ.

ಅದೇ ಸಮಯದಲ್ಲಿ ಮ್ಯಾಗಜಿನ್ ಒಂದು ಮುಚ್ಚುವ ಹಂತದಲ್ಲಿದ್ದು ಕೊನೆಯ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿತ್ತು. ಕೊನೆಯ ಸಂಚಿಕೆಯಾದ ಕಾರಣ ಅದರಲ್ಲಿ ಪ್ರಕಟವಾಗುವ ಲೇಖನಗಳ ಕುರಿತಾಗಿ ಅಷ್ಟೇನೂ ತಲೆ ಕೆಡಿಸಿಕೊಳ್ಳದೆ ಇದ್ದ ಸಮಯದಲ್ಲಿ ಆ ಕೊನೆಯ ಸಂಚಿಕೆಯಲ್ಲಿ ಸ್ಟ್ಯಾನ್ಲಿ ತಾನು ಚಿತ್ರಿಸಿದ ಹೊಸ ಕೀಟವನ್ನು ಹೀರೋ ಆಗಿರಿಸಿದ ಕಥೆಯನ್ನು ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಹಾಕಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಕೊನೆಯ ಸಂಚಿಕೆ ಪ್ರಕಟವಾಗಿ ಸ್ಟ್ಯಾನ್ಲಿ ತಾನು ಹಾಕಿದ ಕಾಮಿಕ್ ಹೀರೋನ ಪಾತ್ರ ಜನರ ಮೆಚ್ಚುಗೆ ಗಳಿಸಿದ್ದಲ್ಲದೇ ದಾಖಲೆಯ ಸಂಖ್ಯೆಯಲ್ಲಿ ಮ್ಯಾಗಜಿನ್ ಪ್ರತಿಗಳ ಮಾರಾಟವಾಗಲು ಕಾರಣವಾಯಿತು. ಧಾವಿಸಿ ಬಂದ ಮಾರ್ವೆಲ್ ಕಾಮಿಕ್ ನ ಪ್ರಕಾಶಕ ಸ್ಟ್ಯಾನ್ ಲಿ ಗೆ ಆತ ಸೃಷ್ಟಿಸಿದ ಹೊಸ ಕಾಮಿಕ್ ಹೀರೋನ ಪಾತ್ರ ಜನ ಮನ್ನಣೆ ಗಳಿಸಿದ್ದು ಆ ಪಾತ್ರವನ್ನು ಮುಂದುವರಿಸಿಕೊಂಡು ಹೋಗಲು ಆಗ್ರಹಿಸಿದ.

ಅತ್ಯಂತ ನಿರುಪಯುಕ್ತ ಕಥೆ ಎಂದು ತಿರಸ್ಕರಿಸಿದ ಪ್ರಕಾಶಕನೇ ಮತ್ತೆ ಆ ಕಥೆಯನ್ನು ಮುಂದುವರಿಸಲು ಹೇಳಿದಾಗ ಲೀ ಉತ್ಸಾಹ ಹೆಚ್ಚಾಯಿತು. ಮುಂದೆ ಆ ಕೀಟವನ್ನೇ ತನ್ನ ಕಾಮಿಕ್ ನ ಹೀರೋನನ್ನಾಗಿಸಿ ಸ್ಟಾನ್ ಲಿ ರೋಚಕವಾದ ಕಥೆಗಳನ್ನು ಬರೆಯಲಾರಂಭಿಸಿದ. ಒಂದಕ್ಕಿಂತ ಒಂದು ಕಥೆಗಳು ಜನ ಮೆಚ್ಚುಗೆ ಗಳಿಸುತ್ತಾ ಹೋದಂತೆ ಆ ಪಾತ್ರ ಜಗತ್ತಿನ ಅತಿ ದೊಡ್ಡ ಕಾಮಿಕ್ ಹೀರೋ ಎಂದು ಮನ್ನಣೆ ಗಳಿಸಿತು. ಯಾವುದು ಆ ಪಾತ್ರ ಎಂದು ಊಹಿಸಬಲ್ಲಿರಾ!? ಅದುವೇ ಆಬಾಲವೃದ್ಧರಾದಿಯಾಗಿ ಎಲ್ಲರೂ ಮೆಚ್ಚುವ ಸ್ಪೈಡರ್ ಮ್ಯಾನ್.

ನಾವೆಲ್ಲ ಚಿಕ್ಕವರಿದ್ದಾಗ ಸ್ಪೈಡರ್ ಮ್ಯಾನ್ ಕುರಿತು ಸಾಕಷ್ಟು ಊಹೆಗಳನ್ನು, ಕಲ್ಪನೆಗಳನ್ನುಮಾಡಿಕೊಂಡಿದ್ದೇವಷ್ಟೇ... ಅದು ಒಂದು ಕಾಲ್ಪನಿಕ ಪಾತ್ರ ಎಂದು ಊಹಿಸಲು ಸಾಧ್ಯವಿಲ್ಲದಷ್ಟು ನಮ್ಮನ್ನು ಆವರಿಸಿಕೊಂಡ ಪಾತ್ರ ಸ್ಪೈಡರ್ ಮ್ಯಾನ್.

ಈ ಕಥೆಯನ್ನು ನಂತರದಲ್ಲಿ ಪತ್ರಕರ್ತರಿಗೆ ಹೇಳಿದ ಸ್ಟ್ಯಾನ್ಲಿ



"ನಿಜವಾಗಿಯೂ ಒಂದು ಯೋಜನೆ ನಿಮ್ಮ ಮನದಲ್ಲಿ ರೂಪುಗೊಂಡಿದ್ದರೆ, ಅದು ಅತ್ಯುನ್ನತ ಯೋಜನೆ ಎಂದು ನೀವು ನಂಬುತ್ತಿದ್ದರೆ, ಅದು ಸರಿ ಇಲ್ಲ ಎಂದು ಬೇರೆಯವರು ಹೇಳುವ ಮಾತುಗಳಿಗೆ ತಲೆಕೆಡಿಸಿಕೊಳ್ಳಬೇಡಿ".

ನೋಡಿದಿರಾ ಸ್ನೇಹಿತರೆ, ನಮ್ಮ ಯೋಜನೆಗಳನ್ನು ಹೀಯಾಳಿಸುವ ಮತ್ತು ತಿರಸ್ಕರಿಸುವವರಿಗಿಂತ ಸಾವಿರಪಟ್ಟು ಹೆಚ್ಚು ಶಕ್ತಿ ನಮ್ಮ ಧೈರ್ಯ ಮತ್ತು ಆತ್ಮವಿಶ್ವಾಸಕ್ಕಿರುತ್ತದೆ. ಅದರ ಅರಿವು ನಮಗಿರಬೇಕಷ್ಟೇ.

ಎಷ್ಟೋ ಬಾರಿ ಬೇರೆಯವರ ಮಾತುಗಳಿಗೆ ಬೆಲೆ ಕೊಟ್ಟು, ನಾಲ್ಕು ಜನ ಏನು ಹೇಳುತ್ತಾರೆ ಎಂದು ಹಿಂಜರಿದು ನಾವು ಅಂದುಕೊಂಡ ಕೆಲಸಗಳನ್ನು ಮಾಡಲು ಹಿಂದೇಟು ಹಾಕುತ್ತೇವೆ.

ನಿಜವಾಗಿಯೂ ನಾವು ಮಾಡುವ ಕೆಲಸದಲ್ಲಿ ನಮಗೆ ನಂಬಿಕೆ ಇದ್ದರೆ, ಅದು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ಕೊಡುತ್ತದೆ ಎಂಬ ಭರವಸೆ ನಮಗಿದ್ದರೆ ಧೈರ್ಯದಿಂದ ಮುಂದುವರೆಯಬೇಕು.. ಅಂತಿಮವಾಗಿ ಜಯ ನಮಗಾಗಿ ವಿಜಯಮಾಲೆಯನ್ನು ಹಿಡಿದು ಕಾಯುತ್ತಿರುತ್ತದೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**28–07–2024 – ಭಾನುವಾರ**

| | |
|---|---|
| ತಿಥಿ | : ಅಷ್ಠಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ಶೂಲ |
| ಕರಣ | : ಬಾಳವ |
| ಸೂರ್ಯೋದಯ | : 05:57:08 |
| ಸೂರ್ಯಾಸ್ತ | : 19:09:30 |
| ರಾಹು | : 17:30–19:10 |
| ಯಮಘಂಡ | : 12:33–14:12 |
| ಗುಳಿಕ | : 15:51–17:30 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 27–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.68 ಅಡಿ |
| ಒಳ ಹರಿವು | 103676 ಕ್ಯುಸೆಕ್ |
| ಹೊರ ಹರಿವು | 117571 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 100.523 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1615.56 ಅಡಿ |
| ಒಳ ಹರಿವು | 111566 ಕ್ಯುಸೆಕ್ |
| ಹೊರ ಹರಿವು | 107 ಕ್ಯುಸೆಕ್ |
| ಸಾಮರ್ಥ್ಯ | 49.760 ಟಿಎಂಸಿ |

# ವಿದ್ಯಾರ್ಥಿಗಳು ಯಾರೂ ಅಶಕ್ತರಲ್ಲ ನಿಮ್ಮೊಳಗಿನ ಶಕ್ತಿ ನೀವೇ ಅರಿಯಿರಿ

### ಸ್ವಾಮಿ ನಿರ್ಭಯಾನಂದ ಸರಸ್ವತಿ ಹೇಳಿಕೆ । ವಿಎಸ್‌ಕೆ ವಿವಿ 15 ನೇ ವರ್ಷದ ಸಂಸ್ಥಾಪನಾ ದಿನಾಚರಣೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಇಂದಿನ ಪೀಳಿಗೆಯ ವಿದ್ಯಾರ್ಥಿಗಳು ತಮ್ಮಲ್ಲಿರುವ ಅಗಾಧ ಜ್ಞಾನದ ಶಕ್ತಿಯನ್ನು ಅರಿತುಕೊಂಡರೆ ಮಾತ್ರ ತಾವು ಅಂದುಕೊಂಡಿದ್ದನ್ನು ಸಾಧಿಸ ಬಹುದು ಎಂದು ಗದಗ ಮತ್ತು ವಿಜಯನಗರ ಜಿಲ್ಲೆಯ ರಾಮಕೃಷ್ಣ ವಿವೇಕಾನಂದ ಆಶ್ರಮ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರು ಹೇಳಿದರು.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಯಲು ರಂಗಮಂದಿರ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯದ 15ನೇ ಸಂಸ್ಥಾಪನಾ ದಿನ–2024 ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ಯಾರೂ ಅಶಕ್ತರಲ್ಲ, ತಮ್ಮನ್ನು ತಾವು ಕೀಳರಿಮೆ ಮನೋಭಾವನೆಯಿಂದ ಚಿಂತಿಸುತ್ತಿದ್ದಾರೆ. ಇದರಿಂದ ತಮ್ಮ ಗುರಿಯನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಸ್ವಾಮಿವಿವೇಕಾನಂದರ ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ ಎಂಬ ನಾಣ್ನುಡಿಯಂತೆ, ವಿದ್ಯಾರ್ಥಿಗಳು ತಮ್ಮ ಜ್ಞಾನದ ಶಕ್ತಿಯನ್ನು ಅರಿತು ನನ್ನಿಂದ ಸಾಧ್ಯವಿದೆ ಎಂಬ ಭಾವನೆಯನ್ನು ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ನಿರಂತರ ಬೆರೆತಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ವಿದೇಶಗಳಲ್ಲಿ ಭಾರತ ದೇಶದ ಶಿಕ್ಷಣಾವಸ್ಥೆಗೆ ಉನ್ನತ ಸ್ಥಾನವಿದೆ. ಪಾಶ್ಚ್ಯತರ ಆಗಮನಕ್ಕಿಂತ ಹಿಂದೆಯೇ ಭಾರತ ದೇಶದಲ್ಲಿ ಶಿಕ್ಷಣವು ಉನ್ನತ ಮಟ್ಟದಲ್ಲಿತ್ತು. ದೇಶದಲ್ಲಿ ನವ ಪ್ರತಿಭೆಗಳಿಗೆ ಕೊರತೆಯಿಲ್ಲ. ಜಗತ್ತಿಗೆ ವಿಶ್ವವಿದ್ಯಾಲಯಗಳು ಹೇಗೆ ಇರಬೇಕು ಎಂಬುದನ್ನು ತಿಳಿಸಿಕೊಟ್ಟ ದೇಶ ಎಂದರೆ ಅದು ಭಾರತ ದೇಶವಾಗಿದೆ ಎಂದರು.

ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಜೀವನ ರೂಪಿಸಿಕೊಟ್ಟಂತಹ ಪವಿತ್ರ ಸ್ಥಳಗಳು, ಓದು ಕಲಿತು ಉನ್ನತ ಸ್ಥಾನದಲ್ಲಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಗುರುಗಳನ್ನು ಪ್ರೀತಿಸುವ ಗುಣ ಅಳವಡಿಸಿಕೊಳ್ಳಬೇಕು. ಅವರ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಬೆಳೆಯುತ್ತದೆ. ಗುರುಗಳು ಹೇಳಿದ ಗುರುವಾಕ್ಯದಲ್ಲಿ ಶ್ರದ್ಧೆ ವಹಿಸಬೇಕು. ಅಂದಾಗ ಮಾತ್ರ ವಿದ್ಯಾರ್ಥಿಗಳು ಸಮಾಜದಲ್ಲಿ ಅಭಿವೃದ್ಧಿ ಹೊಂದುತ್ತಾರೆ ಎಂದರು.

ವಿಎಸ್‌ಕೆ ವಿಶ್ವವಿದ್ಯಾಲಯದ ಕುಲಸಚಿವ ರುದ್ರೇಶ್.ಎಸ್.ಎನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಹೊರಬಂದು, ಇಂದಿಗೆ 14 ವರ್ಷ ತುಂಬಿ, 15 ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ವಿಶ್ವವಿದ್ಯಾಲಯದಲ್ಲಿ ಗುಣಮಟ್ಟದ ಭೋದನೆ ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕವಾಗಿ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ಪ್ರಥಮದಲ್ಲಿ ಕೇವಲ 4 ವಿಭಾಗಗಳ ಮೂಲಕ ಪ್ರಾರಂಭಗೊಂಡ ವಿಶ್ವವಿದ್ಯಾಲಯವು ಪ್ರಸ್ತುತ 29 ವಿಭಾಗಗಳನ್ನು ಒಳಗೊಂಡಿದ್ದು, ಇನ್ನು ಹಲವಾರು ವಿಭಿನ್ನ ವಿಷಯಗಳನ್ನು ಕಲ್ಪಿಸಲಾಗುವುದು. ವಿಶ್ವವಿದ್ಯಾಲಯದ ಆವರಣದಲ್ಲಿ ಹಸರೀಕರಣಕ್ಕೆ ಒತ್ತು ನೀಡಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ವಿಶ್ವವಿದ್ಯಾಲಯವು ಉನ್ನತ ಮಟ್ಟಕ್ಕೆ ಬೆಳೆಯಲಿದೆ ಎಂದು ಹೇಳಿದರು.

ವಿಎಸ್‌ಕೆ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ತಿಪ್ಪೇರುದ್ರಪ್ಪ ಜೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಸತಿನಿಲಯಗಳ ನಾಮಕರಣ, ವಿವಿಧ ಸೌಲಭ್ಯಗಳನ್ನೊಳಗೊಂಡ ಕಟ್ಟಡಗಳನ್ನು ವಿದ್ಯುಕ್ತವಾಗಿ ಉದ್ಘಾಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ.ರವಿ, ವಿಜಯಪುರ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ತುಳಸಿಮಾಲ ಬಿ.ಕೆ., ಹಾವೇರಿಯ ಕರ್ನಾಟಕ ಜನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಭಾಸ್ಕರ್ ಟಿ.ಎಮ್ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಮಂಜಪ್ಪ ಡಿ.ಹೊಸಮನೆ, ಪ್ರೊ.ಎಮ್.ಎಸ್.ಸುಭಾಷ್, ಕುಲಸಚಿವ(ಮೌಲ್ಯಮಾಪನ) ಪ್ರೊ.ರಮೇಶ್ ಓ.ಓಲೇಕಾರ, ವಿತ್ತಾಧಿಕಾರಿ ನಾಗರಾಜ ಸೇರಿದಂತೆ ವಿಶ್ವವಿದ್ಯಾಲಯದ ಮಾಜಿ ಕುಲಸಚಿವರುಗಳು, ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು ಹಾಗೂ ವಿವಿಯ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳು ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ–ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

# ನಾರಾಯಣಸ್ವಾಮಿ ಶೋಷಿತರ ಧ್ವನಿಯಾಗುವುದು ನಿಶ್ಚಿತ

### ಬಿಜೆಪಿ ಜಿಲ್ಲಾ ಪ್ರಕೋಷ್ಠಕ ಎಚ್.ಬಿ.ಜಯಪ್ರಕಾಶ್ ಇಂಗಿತ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ವಿಧಾನಪರಿಷತ್‌ನ ಪ್ರತಿಪಕ್ಷದ ನಾಯಕರಾಗಿ ಛಲವಾದಿ ನಾರಾಯಣಸ್ವಾಮಿ ಅವರ ಆಯ್ಕೆಯಿಂದ ಶೋಷಿತ ಸಮುದಾಯದಕ್ಕೆ ಸಾಮಾಜಿಕ ನ್ಯಾಯ ಸಲ್ಲಿಸಿದಂತಾಗಿದೆ ಎಂದು ಬಿಜೆಪಿ ಜಿಲ್ಲಾ ಪ್ರಕೋಷ್ಠಕ ಎಚ್.ಬಿ.ಜಯಪ್ರಕಾಶ್ ತಿಳಿಸಿದ್ದಾರೆ.

ನಾರಾಯಣ ಸ್ವಾಮಿ ಶೋಷಿತ ಸಮುದಾಯದ ಧ್ವನಿಯಾಗುವುದು ನಿಶ್ಚಿತವಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ವಿಜಯೇಂದ್ರ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಪ್ರಭಾರ ರಾಧಾ ಮೋಹನ್ ದಾಸ್ ಇವರು ನಿಜಕ್ಕೂ ಮೇಲ್ಮನೆ ಪ್ರತಿಪಕ್ಷ ಸ್ಥಾನಕ್ಕೆ ಸೂಕ್ತವ್ಯಕ್ತಿಯನ್ನೆ ಆಯ್ಕೆ ಮಾಡಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಶೋಷಿತ ಸಮುದಾಯಗಳನ್ನು ಒಗ್ಗೂಡಿಸಲು ಪಕ್ಷದ ವರಿಷ್ಠರ ತೀರ್ಮಾನ ಪೂರಕವಾಗಲಿದೆ. ಪಕ್ಷದಿಂದ ದಲಿತ ಸಮುದಾಯಕ್ಕೆ ಆದ್ಯತೆ ನೀಡಿರುವುದು ಪಕ್ಷದ ಸಂಘಟನೆಗೆ ಸಹಕಾರಿಯಾಗಲಿದೆ. ಪ.ಜಾತಿ ಮತ್ತು ಪಂಗಡದ ಸಮುದಾಯದ ಹಕ್ಕುಗಳ ರಕ್ಷಣೆಗೆ ದಲಿತ ಸಮುದಾಯದ ಧ್ವನಿಯಾಗಿ ನಾರಾಯಣಸ್ವಾಮಿ ಅವರು ಕಾರ್ಯನಿರ್ವಹಿಸಿದ ಫಲವಾಗಿ ಪಕ್ಷದಿಂದ ರಾಜ್ಯ ಪರಿಶಿಷ್ಠ ಮೋರ್ಚಾದ ರಾಜ್ಯಾಧ್ಯಕ್ಷರನ್ನಾಗಿ ನೇಮಕಗೊಳಿಸಲಾಗಿತ್ತು. ತಮ್ಮ ಹುದ್ದೆಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ ಹಿನ್ನೆಲೆಯಲ್ಲಿ ಇದೀಗ ಮೇಲ್ಮನೆ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಆಡಳಿತ ಪಕ್ಷದ ಲೋಪದೋಷಗಳನ್ನು ಗಮನಸೆಳೆಯುವ ಮೂಲಕ ನ್ಯಾಯ ಒದಗಿಸುವ ಹೋರಾಟ ರೂಪಿಸುವುದು ನಿಶ್ಚಿತವಾಗಿದೆ. ಪಕ್ಷದ ವರಿಷ್ಠರ ಆಯ್ಕೆ ಮತ್ತು ಸಂಘಟನೆ ಕುರಿತಂತೆ ದೂರದೃಷ್ಠಿ ಅಭಿನಂದನಾರ್ಹ ಎಂದು ಎಚ್.ಬಿ.ಜಯಪ್ರಕಾಶ್ ತಿಳಿಸಿದ್ದಾರೆ.

# ಕಾರ್ಗಿಲ್ ಹುತಾತ್ಮರ ಸ್ಮರಣೆ

ಮೊದಲ ಪುಟದಿಂದ

ಜಯ ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರು ಕೂಡಾ ರಾಷ್ಟ್ರಪ್ರೇಮ ಮೆರೆದರು. ಜೆಸಿ ವಿಕ್ರಂ ನಂದಿ ಮೆಡಿಕಲ್, ಜೆಸಿ ಸಕ್ರಪ್ಪ ರೆಡ್ಡಿ ,ಜೆಸಿ ಜಗದೀಶ್ ಚಂದ್ರ ಬೋಸ್, ಜೆಸಿ ಹೇಮಂತ್ ಕುಮಾರ್, ಹೆಗ್ಗಪ್ಪ ಹಳ್ಳಿ, ಜೆಸಿ ಸುರೇಶ್, ಜೆಸಿ ಪ್ರಕಾಶ್ ಮತ್ತು ಹಸಿರು ಹೊನಲು ತಂಡದ ಸದಸ್ಯರು ನಾಗರಾಜ್ ಬಂಜಾರ್, ಪತ್ತಿಕೊಂಡ ಪ್ರಶಾಂತ್, ಅಜಯ್ ಲೇಡಿ ಜೇಸಿಗಳಾದ ರಶ್ಮಿ, ವಿಜಯ, ಟಿ ಹೊನ್ನಮ್ಮ ಈಶ್ವರಪ್ಪ ತುರಕಾಣಿ ಪಾಲ್ಗೊಂಡಿದ್ದರು. ಮೆರವಣಿಗೆ ಯುದ್ದಕ್ಕೂ ಪೊಲೀಸ್ ಇಲಾಖೆ, ನಿವೃತ್ತ ಯೋಧರು ಕಾರ್ಯ ನಿರತರು ಸಿಪಿಐ ವೆಂಕಟಸ್ವಾಮಿ ಟಿ ಮತ್ತು ಪಿಎಸ್ಐ ಗೀತಾಂಜಲಿ ಶಿಂಧೆ ಹಾಗೂ ಪೊಲೀಸ್ ಸಿಬ್ಬಂದಿ ವಿಜಯೋತ್ಸವದ ಮೆರವಣಿಗೆ ಉದ್ದಕ್ಕೂ ಸಹಕಾರ ನೀಡಿದರು.






## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC SOCIAL SCIENCE Hampi Times Margadarshi 2024-25

### ರಾಜ್ಯಶಾಸ್ತ್ರ ಅಧ್ಯಾಯ– 6

Date: 28-07-2024

## ಸಾರ್ವಜನಿಕ ಆಡಳಿತ –ಒಂದು ಪರಿಚಯ

1. ಸಾರ್ವಜನಿಕ ಆಡಳಿತದ ಪಿತಾಮಹ ಯಾರು?
**ಉತ್ತರ :** ವುಡ್ರೋವಿಲ್ಸನ್

2. ಸಾರ್ವಜನಿಕ ಆಡಳಿತ ಪದವನ್ನು ಮೊಟ್ಟಮೊದಲ ಬಾರಿಗೆ ಬಳಸಿದವರು ಯಾರು ?
**ಉತ್ತರ :** ಅಲೆಕ್ಸಾಂಡರ್ ಹ್ಯಾಮಿಲ್ಟನ್

3. ಸಾರ್ವಜನಿಕ ಆಡಳಿತದ ಅಧ್ಯಯನದ ಪ್ರಾರಂಭವಾದ ದೇಶ ಯಾವುದು ?
**ಉತ್ತರ :** ಅಮೇರಿಕ

4. ಸಾರ್ವಜನಿಕ ಆಡಳಿತ ಎಂದರೇನು ?
**ಉತ್ತರ :** ರಾಜ್ಯದ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಸರಕಾರದ ಅಂಗವೇ ಸಾರ್ವಜನಿಕ ಆಡಳಿತ

5. ರಾಜ್ಯ ಲೋಕಸೇವಾ ಆಯೋಗದ ಸದಸ್ಯರನ್ನು ನೇಮಿಸುವವರು ಯಾರು ?
**ಉತ್ತರ :** ರಾಜ್ಯಪಾಲರು

6. ಕೇಂದ್ರಲೋಕ ಸೇವಾ ಆಯೋಗದ ಕೇಂದ್ರ ಕಛೇರಿ ಎಲ್ಲಿದೆ ?
**ಉತ್ತರ :** ನವದೆಹಲಿಯಲ್ಲಿದೆ

7. ಪ್ರತ್ಯಕ್ಷ ನೇಮಕಾತಿ ಹಾಗು ಪರೋಕ್ಷ ನೇಮಕಾತಿಗಳನ್ನು ವ್ಯತ್ಯಾಸವನ್ನು ತಿಳಿಸಿರಿ
**ಉತ್ತರ :** **ಪ್ರತ್ಯಕ್ಷನೇಮಕಾತಿ**
* ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.
* ನೇರ ನೇಮಕಾತಿ ಎನ್ನುವರು
* ಅಭ್ಯರ್ಥಿಗಳು ಸಾಮಾನ್ಯ & ವಿಶೇಷ ಅರ್ಹತೆಗಳನ್ನು ಹೊಂದಿರಬೇಕು.

**ಪರೋಕ್ಷ ನೇಮಾತಿ**
* ಸರ್ಕಾರಿ ಸೇವೆಯಲ್ಲಿರುವವರನ್ನು ಪದೋನ್ನತಿ ಅಥವಾ ಬಡ್ತಿ ಮೂಲಕ ನೇಮಕಾತಿ ಮಾಡಲಾಗುತ್ತದೆ.
* ಆಂತರಿಕ ನೇಮಕಾತಿ ಎನ್ನುವರು.
* ವಿದ್ಯಾರ್ಹತೆ ಮತ್ತು ಸೇವಾ ಹಿರಿತನದ ಆಧಾರದ ಮೇಲೆ ಬಡ್ತಿ ನೀಡಲಾಗುತ್ತದೆ.

8. ಕೇಂದ್ರಲೋಕ ಸೇವಾ ಆಯೋಗದ ರಚನೆಯನ್ನು ವಿವರಿಸಿ. 3 ಅಂಕ
**ಉತ್ತರ :** ಸಂವಿಧಾನದ ವಿಧಿ 315ರ ಅಡಿಯಲ್ಲಿ ಸ್ಥಾಪಿತವಾಗಿದೆ.
* ಆಯೋಗದಲ್ಲಿ ಒಬ್ಬರು ಅಧ್ಯಕ್ಷ ಮತ್ತು 10 ಜನ ಸದಸ್ಯರು ಇರುತ್ತಾರೆ.
* ಇವರುಗಳನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ.
* ಸದಸ್ಯರುಗಳ ಅಧಿಕಾರಾವಧಿಯು ಆರು ವರ್ಷಗಳು ಅಥವಾ ಅವರಿಗೆ 65 ವರ್ಷಗಳ ವಯೋಮಾನ.
* ರಾಷ್ಟ್ರಾಧ್ಯಕ್ಷರು ದುರ್ನಡತೆ ಆಧಾರದ ಮೇಲೆ ಸದಸ್ಯರನ್ನು ವಜಾ ಮಾಡಬಹುದು.
* ಆಯೋಗದಲ್ಲಿ ಕಾರ್ಯದರ್ಶಿಯವರು ಇರುತ್ತಾರೆ.

9. ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿಶ್ಲೇಷಿಸಿ. 4ಅಂಕ
**ಉತ್ತರ :** ಲೂಥರ್ಗುಲಿಕರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು "ಪೋಸ್ಡ್‌ಕಾರ್ಬ್" (POSDCoRB)ಎಂಬ ಇಂಗ್ಲಿಷ್ ಪದದಲ್ಲಿ ಸೂಚಿಸಿದ್ದಾರೆ.
1) P–ಯೋಜಿಸುವಿಕೆ (Planning): ಕಾರ್ಯಗಳು ಅನುಷ್ಠಾನಕ್ಕೆ ಯೋಜನೆಯನ್ನು ಸಿದ್ಧಪಡಿಸುವುದು.
2) O–ಸಂಘಟಿಸುವಿಕೆ (Organising): ವಿವಿಧ ಇಲಾಖೆಗಳನ್ನು ಸಂಘಟಿಸಿ ಕಾರ್ಯಗಳನ್ನು ಹಂಚುವುದು.
3) S–ಸಿಬ್ಬಂದಿಗಳ ಪೂರೈಕೆ (Staffing): ಸಿಬ್ಬಂದಿಗಳ ನೇಮಕ, ತರಬೇತಿ ಹಾಗೂ ನಿಯಮಗಳನ್ನು ನಿರ್ಧರಿಸುವುದು.
4) D–ನಿರ್ದೇಶಿಸುವಿಕೆ (Directing): ವಿವಿಧ ಇಲಾಖೆಗಳಿಗೆ ಕಾಲಕಾಲಕ್ಕೆ ಆದೇಶಗಳನ್ನು ನೀಡುವುದು.
5) Co– ಸಮನ್ವಯಗೊಳಿಸುವಿಕೆ (Co-rdinating) :ವಿವಿಧ ಇಲಾಖೆಗಳ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಅವುಗಳ ಕಾರ್ಯಗಳನ್ನು ಸಮನ್ವಯಗೊಳಿಸುವುದು.
6) R–ವರದಿನೀಡುವಿಕೆ (Reporting): ಇಲಾಖೆಗಳ ಕಾರ್ಯಗಳ ಬಗ್ಗೆ ಶಾಸಕಾಂಗಕ್ಕೆ ವರದಿಸಲ್ಲಿಸುವುದು.
7) B–ಆಯವ್ಯಯ ಸಿದ್ಧಪಡಿಸುವಿಕೆ (Budgeting): ಹಣಕಾಸಿನ ಯೋಜನೆ, ಲೆಕ್ಕಪರಿಶೋಧನೆ ನಿರ್ವಹಿಸುವುದು.

10. ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸಿರಿ. 3 ಅಂಕ.
**ಉತ್ತರ :** 1) ಸಾರ್ವಜನಿಕ ಆಡಳಿತವು ಸರ್ಕಾರದ ಆಧಾರಸ್ತಂಭವಾಗಿದೆ.
2) ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ಸೇವೆಸಲ್ಲಿಸುತ್ತಿದೆ.
3) ಕಾನೂನು ಮತ್ತು ನೀತಿಗಳ ಅನುಷ್ಠಾನ.
4) ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುತ್ತದೆ.
5) ಸಾಮಾಜಿಕ ಭದ್ರತೆಯನ್ನು ಧೃಡಪಡಿಸುತ್ತದೆ.
6) ಶಾಸಕಾಂಗ ಮತ್ತು ಕಾರ್ಯಾಂಗಕ್ಕೂ ಸಹಾಯಮಾಡುತ್ತದೆ.
7) ಸಾರ್ವಜನಿಕ ಯೋಜನೆಗಳಿಗೆ ಮಾಹಿತಿಯನ್ನು ಒದಗಿಸುತ್ತದೆ.
8) ಸುಖೀರಾಜ್ಯ ನಿರ್ಮಾಣಕ್ಕೆ ಸಾರ್ವಜನಿಕ ಆಡಳಿತವು ಅಗತ್ಯವಾಗಿದೆ.

" ನಿನ್ನ ಏಳಿಗೆಗೆ ನೀನೇ ಶಿಲ್ಪಿ "

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ.** ಸಮಾಜ ವಿಜ್ಞಾನ ಶಿಕ್ಷಕರು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA